# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:01 • ಸಂಚಿಕೆ:240 • ನೋಂದಣಿ ನಂ.:KARKAN27911 • ವಿಜಯನಗರ • 17.02.2024 • ಶನಿವಾರ • ಪುಟ:04 • ಬೆಲೆ:2
Volume:01 • Issue:240 • Reg.No:KARKAN27911 • VIJAYANAGARA • 17.02.2024 • Saturday • Page:04 • Rs:2







# ನಾಡಿನ ಸಂಗೀತ ವಿಭಾಗಗಳ ಮಾತೃ ಸಂಸ್ಥೆಯಾಗಲಿ ಕನ್ನಡ ವಿವಿ

## ಹಿಂದುಸ್ತಾನಿ ಸಂಗೀತ ನಿವೃತ್ತ ಪ್ರಾಧ್ಯಾಪಕ ಪ್ರೊ. ಸಿದ್ದರಾಮಯ್ಯ ಮಠಪತಿ ಗೋರಟಾ ಅಭಿಮತ

## ಕನ್ನಡ ವಿವಿಯಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ತರಬೇತಿ ಶಿಬಿರ ಉದ್ಘಾಟನೆ



**ಹಂಪಿ ಟೈಮ್ಸ್ ಹೊಸಪೇಟೆ**

ಸಂಗೀತ ಕಲಾವಿದರು ಮುಂದಿನ ಪೀಳಿಗೆಗೆ ಮಾರ್ಗದರ್ಶಕರಾಗುವುದರ ಮೂಲಕ ನಾಡಿನ ಕಲೆ, ಸಂಸ್ಕೃತಿ, ಉಳಿವಿನೊಂದಿಗೆ ತಮ್ಮ ಸ್ವರ ಮಾಧುರ್ಯದಿಂದ ನಾಡನ್ನಾಳುವವರಾಗಬೇಕು ಎಂದು ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದ ಹಿಂದುಸ್ತಾನಿ ಸಂಗೀತ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಸಿದ್ದರಾಮಯ್ಯ ಮಠಪತಿ ಗೋರಟಾ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗದ ಷಡ್ಜ ವೇದಿಕೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ತರಬೇತಿ ಶಿಬಿರವನ್ನು ತಂಬೂರಿ ಮೀಟುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಕನ್ನಡ ವಿಶ್ವವಿದ್ಯಾಲಯದ ಸಂಗೀತ ವಿಭಾಗವು ನಾಡಿನ ಇತರೆ ಸಂಗೀತ ವಿಭಾಗಗಳ ಮಾತೃ ಸಂಸ್ಥೆಯಾಗಬೇಕು. ಅನುಭವಿ ಸಂಗೀತ ವಿದ್ವಾಂಸರು ತಮ್ಮ ಅನುಭವಸಾರವನ್ನು ವಿದ್ಯಾರ್ಥಿಗಳಿಗೆ ನೀಡುವುದರ ಮೂಲಕ ಅವರ ಸಂಗೀತ ಕಲಿಕೆಗೆ ಪ್ರೋತ್ಸಾಹ ನೀಡಬೇಕು. ಇಂತಹ ತರಬೇತಿಗಳು ಸಂಗೀತದ ವಿವಿಧ ಮಜಲುಗಳನ್ನು ತಿಳಿಯಲು ಸಹಕರಿಸುತ್ತವೆ. ವಿದ್ಯಾರ್ಥಿಗಳು ತರಬೇತಿ ಶಿಬಿರಗಳ ಸದುಪಯೋಗ ಪಡೆಯಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಸಚಿವರಾದ ಡಾ. ವಿಜಯ ಪೂಣಚ್ಚ ತಂಬಂಡ ಅವರು ಮಾತನಾಡುತ್ತ ವಿಶ್ವವಿದ್ಯಾಲಯದ ಸಂಗೀತ ವಿಭಾಗವು ಸಂಸ್ಥಾಪಕ ಕುಲಪತಿಗಳಾದ ಡಾ.ಚಂದ್ರಶೇಖರ ಕಂಬಾರರ ಕನಸಾಗಿದೆ. ಇದರ ಏಳಿಗೆಗೆ ಹಲವರ ಶ್ರಮವಿದೆ. ಸಂಗೀತವು ಮಾನವನ ಬದುಕಿಗೆ ಸರ್ವವ್ಯಾಪಿಯ ಪ್ರತೀಕ. ಸಂಗೀತ ಹಲವರಿಗೆ ಬದುಕುವುದರ ಜೊತೆಗೆ ಪ್ರತಿಷ್ಠೆ ತಂದುಕೊಡತ್ತದೆ. ಸಂಗೀತವು ಮನಸ್ಸನ್ನು ಮೃದುಗೊಳಿಸುತ್ತದೆ. ಪತ್ರಿಯೊಬ್ಬರು ಅದೃಷ್ಟ ಹಾಗೂ ಪರಿಶ್ರಮದ ಜೊತೆಗೆ ಪ್ರಯತ್ನ ಪಡಬೇಕು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿಜಯನಗರ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕರಾದ ಶ್ರೀ ಸಿದ್ದಲಿಂಗೇಶ ರಂಗಣ್ಣನವರ ಮಾತನಾಡುತ್ತ ಸಂಗೀತವು ಒಂದು ದೈತ್ಯ ಶಕ್ತಿ. ಸಂಗೀತಕ್ಕೆ ಜಾತಿ, ಧರ್ಮ, ಭಾಷೆ, ಪ್ರಾದೇಶಿಕತೆಯ ಯಾವುದೇ ಕಟ್ಟಳೆಗಳಿಲ್ಲ. ದೇಶದ ಇತಿಹಾಸ ತಿಳಿಯಲು ಪುಟ ತೆರೆಯುವ ಅವಶ್ಯಕತೆ ಇಲ್ಲ, ದೇಶದ ಭವಿಷ್ಯ ನೋಡಲು ಪ್ರಯೋಗ ಮಾಡಬೇಕಿಲ್ಲ, ಬದಲಾಗಿ ದೇಶದ ಸಾಂಸ್ಕೃತಿಕ ಲೋಕವು ಎಲ್ಲವನ್ನು ತಿಳಿಸುತ್ತದೆ. ಮೇಘ ಮಲ್ಹಾರ ರಾಗವನ್ನು ಉಲ್ಲೇಖಿಸುತ್ತ ಪ್ರಕೃತಿಯನ್ನು ನಿಯಂತ್ರಿಸುವ ಶಕ್ತಿ ಸಂಗೀತಕ್ಕಿದೆ ಎಂದರು.

ಈ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗದ ಮುಖ್ಯಸ್ಥರಾದ ಡಾ. ವೀರೇಶ ಬಡಿಗೇರ ಅವರು ಗಣ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಡಗಂಚಿ ಕೇಂದ್ರೀಯ ವಿಶ್ವವಿದ್ಯಾಲಯದ ಸಂಗೀತ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಜಯದೇವಿ ಜಂಗಮಶೆಟ್ಟಿ ಅವರು ಆಶಯ ನುಡಿಗಳನ್ನಾಡಿದರು. ಲಲಿತಕಲಾ ನಿಕಾಯದ ಡೀನರಾದ ಡಾ.ಶಿವಾನಂದ ವಿರಕ್ತಮಠ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಸಂಗೀತ ಮತ್ತು ನೃತ್ಯ ವಿಭಾಗದ ಪ್ರಾಧ್ಯಾಕರು, ಸಂಶೋಧನಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ನಿಂದನೆ ಯುವಕನ ಕೊಲೆ

## ಬಂಗಾರಿ ಮಂಜುನಾಥ ಕೊಲೆಗೀಡಾದ ವ್ಯಕ್ತಿ




**ಹಂಪಿ ಟೈಮ್ಸ್, ಹಗರಿಬೊಮ್ಮನಹಳ್ಳಿ**



ಹಳೇ ವೈಷಮ್ಯ ಸಂಬಧಿಗಳ ಬಡಿದಾಟ ಯುವಕನ ಕೊಲೆಯಲ್ಲಿ ಹಂತ್ಯವಾದ ಘಟನೆ ಶುಕ್ರವಾರ ಬೆಳಗಿನ ಜಾವ ನಡೆದಿದ್ದು ಪ್ರಕರಣ ದಾಖಲಾಗಿದೆ ಎಂದು ವಿಜಯನಗರ ಪೊಲೀಸ್ ಜಿಲ್ಲಾ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್. ತಿಳಿಸಿದ್ದಾರೆ.

ಪಟ್ಟಣದ ಮಗಿಮಾವಿನಹಳ್ಳಿ ರಸ್ತೆಯ ಜೆಸ್ಕಾಂ ಇಲಾಖೆ ಕೂಗಳತೆಯ ದೂರದಲ್ಲಿರುವ, ದೂರುದಾರ ಬಂಗಾರಿ ಸಂದೀಪ್ ಮನೆಯ ಹತ್ತಿರದಲ್ಲಿ ಈ ನಡೆದ ಘಟನೆ ನಡೆದಿದ್ದು, ಬಂಗಾರಿ ಮಂಜುನಾಥ(30) ಸಂದೀಪನ ಅಣ್ಣನಾಗಿದ್ದು, ಮಂಜುನಾಥನಿಗೆ ಮದುವೆಯಾಗಿ ಬ್ಯಾಲ್ಯಾಳು ಗ್ರಾಮದ ಇನ್ನೊಂದು ಮನೆಯಲ್ಲಿ ದಂಪತಿಗಳು ವಾಸವಾಗಿದ್ದರು. ಗುರುವಾರ ರಾತ್ರಿ ಮಂಜುನಾಥ ಹೆಂಡತಿಗೆ ಆರೋಪಿಗಳಾದ ಉಪ್ಪಾರ್ ಬಸಪ್ಪ ಮತ್ತು ಅವರ ಕಡೆಯವರು ಪೋನ್ ಮಾಡಿ ಅವಾಚ್ಯ ಶಬ್ಧಗಳಿಂದ ನಿಂದಿಸಿದರೆಂದು ನಂತರ ವಿಷಯ ಮಂಜುನಾಥನಿಗೆ ತಿಳಿಸಿದರೆಂದು. ಗ್ರಾಮದಿಂದ ಸ್ಥಳಕ್ಕೆ ಆಗಮಿಸಿದ ಮಂಜುನಾಥ ಮತ್ತು ಅವರ ಸ್ನೇಹಿತರು ಯಾವುದೇ ವಿಷಯ ನನ್ನನ್ನು ಕೇಳಬೇಕು ಅದು ಬಿಟ್ಟು ನನ್ನ ಹೆಂಡತಿಯ ಹತ್ತಿರ ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದು ಸರಿಯಲ್ಲವೆಂದು ಹೇಳಿದ್ದಾನೆ.

ಹಳೇ ವೈಶಮ್ಯ ಮತ್ತು ಹೊಟ್ಟೆಕಿಚ್ಚಿನಿಂದ ಇದ್ದ ನಮ್ಮ ಸಂಬಂಧಿಗಳಾದ ಬಂಗಾರಿ ಹನುಮಂತರಾಯ, ಬಂಗಾರಿ ಯಮನೂರಿ, ಬಂಗಾರಿ ನಾಗರಾಜ್, ಬಂಗಾರಿ ಉದಯಕುಮಾರ್ ಹಾಗೂ ಅವಿನಾಶ ಮತ್ತು ಪ್ರಮುಖವಾಗಿ ಉಪ್ಪಾರ ಬಸಪ್ಪ ಎನ್ನುವವರು ಸೇರಿ, ಅಣ್ಣ ಮಂಜುನಾಥನ ಮೇಲೆ ಕಬ್ಬಿಣದ ಸರಳು ಮತ್ತು ಚಾಕುವಿನಿಂದ ಮಧ್ಯರಾತ್ರಿ 2ಗಂಟೆಯ ನಂತರ ಹಲ್ಲೆ ಮಾಡಿ ಕೊಲೆಮಾಡಿದ್ದಾರೆ ಎಂದು ದೂರಿರುವ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ತಿಳಿಸಿದರು. ಕೊಲೆಮಾಡಿದ 6ಜನರನ್ನು ಬಂದಿಸಲಾಗಿದ್ದು ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದರು.

ಕೂಡ್ಲಿಗಿಯ ಡಿವೈಎಸ್‌ಪಿ ಮಲ್ಲೇಶಪ್ಪ ನೇತೃತ್ವದಲ್ಲಿ ಮುಂದಿನ ತನಿಖೆ ಕೈಗೊಳ್ಳಲಾಗಿದೆ. ಸಿಪಿಐ ವಿಕಾಸ್ ಲಂಬಾಣಿ ಮತ್ತು ಪಿಎಸ್‌ಐ ಬಸವರಾಜ್ ಅಡವಿಬಾವಿ ಸೇರಿದಂತೆ ಸಿಬ್ಬಂದಿಯವರು ಕಾರ್ಯಚಾರಣೆಯಲ್ಲಿ

**ವಿಶೇಷ ಲೇಖನಗಳು**

## ಬಸವಣ್ಣ ಮತ್ತು ಸಮಾಜವಾದ


ಪುಟ 3ರಲ್ಲಿ


ಡಾ. ಅಮರೇಶ ನುಗಡೋಣಿ
ಖ್ಯಾತ ಲೇಖಕರು, ಹೊಸಪೇಟೆ



## ಪರಿಕ್ಷೆಗಳ ಫಲಿತಾಂಶ ನಮ್ಮ ಕೈಲಿದೆ


ಪುಟ 2ರಲ್ಲಿ


ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹ.ಬೊ.ಹಳ್ಳಿ.



**ಮೈಕ್ರೋ ನ್ಯೂಸ್**

## ಇಂದು ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

**ಹಂಪಿ ಟೈಮ್ಸ್ ಕೊಪ್ಪಳ**

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ಅವರು ಫೆಬ್ರವರಿ 17ರಂದು ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಫೆ.17ರ ಬೆಳಿಗ್ಗೆ ಹೊಸಪೇಟೆಯಿಂದ ನಿರ್ಗಮಿಸಿ ಬೆಳಿಗ್ಗೆ 10.30ಕ್ಕೆ ಕೊಪ್ಪಳ ನಗರಕ್ಕೆ ಆಗಮಿಸಿ, ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆಯುವ ಸಾಂಸ್ಕೃತಿಕ ನಾಯಕ ವಿಶ್ವಗುರು ಶ್ರೀ ಬಸವಣ್ಣನವರ ಭಾವಚಿತ್ರ ಅನಾವರಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. 11 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲೆಯ ಹಿರಿಯ ಅಧಿಕಾರಿಗಳೊಂದಿಗೆ ಕನಕಗಿರಿ ಉತ್ಸವ–2024ರ ಕುರಿತು ಪೂರ್ವ ಭಾವಿ ಸಭೆ ನಡೆಸುವರು. ಬಳಿಕ ಮಧ್ಯಾಹ್ನ 1 ಗಂಟೆಗೆ ಕನಕಗಿರಿಗೆ ತೆರಳಿ, ಜಿಲ್ಲೆಯ ಹಿರಿಯ ಅಧಿಕಾರಿಗಳೊಂದಿಗೆ ಕನಕಗಿರಿ ಉತ್ಸವ ಕಾರ್ಯಕ್ರಮದ ಸ್ಥಳ ಪರಿಶೀಲನೆ ಮತ್ತು ವೀಕ್ಷಣೆ ಮಾಡುವರು. ಕನಕಗಿರಿ ಗೃಹಕಚೇರಿಯಲ್ಲಿ ಮಧ್ಯಾಹ್ನ 3 ರಿಂದ ಸಂಜೆ 7 ಗಂಟೆಯವರೆಗೆ ಸಾರ್ವಜನಿಕರ ಭೇಟಿ ಮತ್ತು ಕುಂದುಕೊರತೆಗಳ ವಿಚಾರಣೆ ಮಾಡಿ, ಅಲ್ಲಿಂದ ಕಾರಟಗಿಗೆ ತೆರಳಿ, ಸಾರ್ವಜನಿಕರ ಭೇಟಿ ಮತ್ತು ಕುಂದುಕೊರತೆಗಳ ವಿಚಾರಣೆ ಮಾಡಿ ಕಾರಟಗಿಯಲ್ಲಿ ವಾಸ್ತವ್ಯ ಹೂಡುವರು. ಫೆ.18ರಂದು ಸಚಿವರು ಕಾರಟಗಿಯಲ್ಲಿ ಸ್ಥಳೀಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು ಹಾಗೂ ಸಾರ್ವಜನಿಕರ ಭೇಟಿ ಮತ್ತು ಕುಂದುಕೊರತೆಗಳ ವಿಚಾರಣೆ ಮಾಡಿ, ಅಂದು ಸಂಜೆ 4 ಗಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಸಚಿವರ ಆಪ್ತಕಾರ್ಯದರ್ಶಿಗಳು ತಿಳಿಸಿದ್ದಾರೆ.

ಮೈಮೇಲೆ ಹರಿದ ಬಟ್ಟೆ
ಇದ್ದರೂ ಚಿಂತೆಯಿಲ್ಲ.
ಕೈಯಲ್ಲೊಂದು
ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.






# ಮೆಸ್ಸಿ ಟ್ರ್ಯಾಕ್ಟರ್ ಖರೀದಿಗೆ ಕಡಿಮೆ ಬಡ್ಡಿದರ

## ವಿಜಯಶ್ರೀ ಮೋಟಾರ್ಸ್ ವತಿಯಿಂದ ಮೆಸ್ಸಿ ಫರ್ಗ್ಯೂಸನ್ ಟ್ರ್ಯಾಕ್ಟರ್ ಮಾರಾಟ




**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯಶ್ರೀ ಮೋಟಾರ್ಸ್ ವತಿಯಿಂದ ರೈತರಿಗೆ ಬರಗಾಲದ ನಿಮಿತ್ತ ಕಡಿಮೆ ಬಡ್ಡಿದರದಲ್ಲಿ ಟ್ರ್ಯಾಕ್ಟರ್ ಗಳನ್ನು ಮಾರಾಟ ಮಾಡಲಾಗುತ್ತಿದೆ ರೈತರು ಪ್ರಯೋಜನ ಪಡೆಯಬಹುದು ಎಂದು ವಿಜಯಶ್ರೀ ಮೋಟಾರ್ಸ್ ಜಿಎಂ ವಸಂತ ಸೆಲ್ವಿರಾಣಿ ಹೇಳಿದರು.

ಶುಕ್ರವಾರ ಗ್ರಾಹಕರಿಗೆ ಟ್ರ್ಯಾಕ್ಟರ್ ಹಸ್ತಾಂತರಿಸಿ ಮಾತನಾಡಿದ ಅವರು, ಮಳೆ ಕೊರತೆಯಿಂದಾಗಿ ಬರಗಾಲ ಎದುರಾಗಿದೆ. ಮಳೆಯಾಶ್ರಿತ ಹೊರತುಪಡಿಸಿ ಎಲ್ಲೆಡೆ ಕೃಷಿ ಚಟುವಟಿಕೆಗಳು ನಡೆಯುತ್ತಿವೆ, ಕೃಷಿ ಹಾಗೂ ಕೃಷಿಯೇತರ ಕೆಲಸಗಳಲ್ಲಿ ದುಡಿಯುವ ಹುಮ್ಮಸ್ಸು ಇರುವ ಯುವಕರಿಗೆ ಪ್ರೋತ್ಸಾಹಿಸಬೇಕೆಂಬ ವಿಜಯಶ್ರೀ ಮೋಟಾರ್ಸ್ ಮಾಲೀಕರ ಆಶಯದಂತೆ ಕಡಿಮೆ ಬಡ್ಡಿದರಲ್ಲಿ ಟ್ರಾಕ್ಟರ್ ಖರೀದಿಗೆ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ. ಉತ್ಸಾಹಿ ರೈತರು ಯೋಜನೆಯ ಪ್ರಯೋಜನ ಪಡೆಯಬೇಕೆಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಹಗರಿಬೊಮ್ಮನಹಳ್ಳಿ ಯುವ ರೈತ ನಾಗರಾಜ ಅವರು ಕಡಿಮೆ ಬಡ್ಡಿ ದರದಲ್ಲಿ ಖರೀದಿಸಿದ ನೂತನ ಮೆಸ್ಸಿ ಫರ್ಗ್ಯೂಸನ್ ಟ್ರ್ಯಾಕ್ಟರ್ ಹಸ್ತಾಂತರಿಸಿದರು. ಶೋರೂಂ ಸಿಬ್ಬಂದಿ, ರೈತರು ಇದ್ದರು.

> ಬರಗಾಲವಿದ್ದರೂ ವಿವಿಧೆಡೆ ಟ್ರ್ಯಾಕ್ಟರ್ ಗೆ ಕೆಲಸಗಳಿವೆ. ಕೃಷಿ ಮತ್ತು ಕೃಷಿಯೇತರ ಚಟುವಟಿಕೆಯಲ್ಲಿ ಬೇಡಿಕೆ ಇವೆ. ಸಮಯಪಾಲನೆ ಮತ್ತು ನಿಷ್ಠೆ ಇದ್ದಲ್ಲಿ ಸಾಕಷ್ಟು ಕೆಲಸಗಳು ಹುಡುಕಿಕೊಂಡು ಬರುತ್ತವೆ. ಮುಂದಿನ ವರ್ಷ ಮತ್ತೊಂದು ಟ್ರ್ಯಾಕ್ಟರ್ ಖರೀದಿಸುವೆ.
>
> **ನರಸಿಂಹ ಮೂರ್ತಿ**, ರೈತ

> ಬರಗಾಲದಲ್ಲಿ ವಿಜಯಶ್ರೀ ಮೋಟಾರ್ಸ್ ವತಿಯಿಂದ ರೈತರಿಗಾಗಿ ವಿಶೇಷ ಕಡಿಮೆ ಬಡ್ಡಿದರ ಸಾಲ ಸೌಲಭ್ಯ ಕಲ್ಪಿಸಲಾಗಿದೆ, ಕಡಿಮೆ ಬಡ್ಡಿದರದ ಯೋಜನೆಯನ್ನು ರೈತರು ಪ್ರಯೋಜನ ಪಡೆಯಬಹುದು.
>
> **– ವಸಂತ ಸೆಲ್ವಿರಾಣಿ,**
> ಜಿ.ಎಂ., ವಿಜಯಶ್ರೀ ಮೋಟಾರ್ಸ್, ಹೊಸಪೇಟೆ.

# ಫೆ.27ಕ್ಕೆ ಸರ್ಕಾರಿ ನೌಕರರ ಮಹಾ ಸಮ್ಮೇಳನ ಯಶಸ್ವಿಗೊಳಿಸಿ

**ಹಂಪಿ ಟೈಮ್ಸ್ ಕೊಟ್ಟೂರು.**

ಹಳೆ ಪಿಂಚಣಿ ಯೋಜನೆ, 7ನೇ ವೇತನ ಆಯೋಗದ ವರದಿಯ ಅನುಷ್ಠಾನ, ಆರೋಗ್ಯ ಸಂಜೀವಿನಿ ಯೋಜನೆ ಲೋಕಾರ್ಪಣೆ, ಬೇಡಿಕೆಗಳ ಈಡೇರಿಸುವಂತೆ ಸರ್ಕಾರಕ್ಕೆ ಆಗ್ರಹಿಸಿ,ಬೃಹತ್ ಸಮ್ಮೇಳನ ಕೈಗೊಂಡಿದ್ದು,ಸರ್ಕಾರಿ ನೌಕರರು ಪಾಲ್ಗೊಂಡು ಸದರಿ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕೆಂದು ಕರಾಸ ನೌಕರರ ಸಂಘದ ತಾಲೂಕು ಅಧ್ಯಕ್ಷ ಜಗದೀಶ.ಕೆ ಮನವಿ ಮಾಡಿದರು .

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು ಹಾಗೂ ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆಗಳ ವೃಂದ ಸಂಘಗಳು ಸೇರಿ ಫೆ.27 ರಂದು ಅರಮನೆ ಮೈದಾನ, ಬೆಂಗಳೂರಿನಲ್ಲಿ ಮಹಾ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದ್ದು ಇದಕ್ಕೆ ಇಲಾಖೆ ಸಹಕರಿಸಬೇಕೆಂದು ಕೋರಿ ಶುಕ್ರವಾರ ತಾಲೂಕು ಆಡಳಿತಕ್ಕೆ ಶಿರಸ್ತೇದಾರರು ಅನ್ನದಾನೇಶ ಬಿ ಪತ್ತಾರಗೆ ಮನವಿ ಪತ್ರ ಸಲ್ಲಿಸಿದರು.

ಸಮ್ಮೇಳನದ ಆಹ್ವಾನ ಕರ ಪತ್ರ ವಿತರಿಸಿ, ಎರಡು ದಿನಗಳ ಅನ್ಯ ಕರ್ತವ್ಯದ ಮೇರೆಗೆ(ಒ.ಒ.ಡಿ) ಸೌಲಭ್ಯವಿದ್ದು,ಪ್ರತಿಯೊಬ್ಬ ನೌಕರರು ಪಾಲ್ಗೊಳಬೇಕು ಹಾಗೆ ಕೊಟ್ಟೂರಿನಿಂದ ವಾಹನದ ವ್ಯವಸ್ಥೆಯನ್ನು ಸಹಾ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಮಯದಲ್ಲಿ ಸಂಘದ ಕಾರ್ಯದರ್ಶಿ ಜಿ.ಸಿದ್ದಪ್ಪ, ಖಜಾಂಚಿ ಬಸವರಾಜ, ಉಪಾಧ್ಯಕ್ಷರಾದ ಎಸ್.ಎಂ.ಗುರುಬಸವರಾಜ, ನಿರ್ದೇಶಕರಾದ ವಿನಯ, ರವಿಕುಮಾರ ತಾಲೂಕ ಕಛೇರಿಯ ಸಿಬ್ಬಂದಿ ಇದ್ದರು.



## ವಚನ ಅರಿವು

### ಪುಣ್ಯ ಬಾ

**ಆರಿಕೆ ಬಿತ್ತಿದ ಗಿಡುವಿನ ಹೂವ ಕೊಯಿದು,**
**ಊರೆಲ್ಲರೂ ಕಟ್ಟಿಸಿದ ಕೆರೆಯ ನೀರ ತಂದು,**
**ನಾಡೆಲ್ಲರೂ ನೋಡಿಯೆಂದು ಪೂಜಿಸುತ್ತ,**
**ಪೂಜಿಸಿದ ಪುಣ್ಯ ಹೂವಿಗೋ? ನೀರಿಗೋ?**
**ನಾಡೆಲ್ಲಕ್ಕೋ ಪೂಜಿಸಿದಾತಗೋ?**
**ಇದ ನಾನರಿಯೆ, ನೀ ಹೇಳೆಂದನಂಬಿಗ ಚೌಡಯ್ಯ.**
**– ಅಂಬಿಗರ ಚೌಡಯ್ಯ**

ಯಾರೋ ಬಿತ್ತಿ ಬೆಳೆದ ಹೂವಿನ ಗಿಡದಿಂದ ಹೂವನ್ನು ಕೊಯಿದು ತೆಗೆದುಕೊಂಡು ಬಂದು, ಇಡೀ ಊರಿನ ಜನರು ಕಟ್ಟಿಸಿದ ಕೆರೆಯ ನೀರನ್ನು ತುಂಬಿಕೊಂಡು ತಂದು, ಊರಿನ ಜನರೆಲ್ಲ ನೋಡಲೆಂದು ಅಥವಾ ಕಾಣುವಂತೆ ದೇವರ ಪೂಜೆ ಮಾಡಿದರೆ ಆ ಪೂಜೆಯಿಂದ ಫಲವು ಯಾರಿಗೆ ದೊರೆಯುತ್ತದೆ? ಯಾರಿಗೂ ದೊರೆಯುವುದಿಲ್ಲ. ದೇವರಿಗೆ ಮುಡಿಸಿದ ಹೂವಿಗೆ ಪುಣ್ಯ ಬರಬೇಕು ತಾನೆ? ನೀರಿನಿಂದ ಮೂರ್ತಿಯನ್ನು ತೊಳೆದು ಪೂಜಿಸಿರುವುದರಿಂದ ನೀರಿಗೆ ಪುಣ್ಯ ಬರಬೇಕು ತಾನೆ? ಕೆರೆಯನ್ನು ಕಟ್ಟಿಸಿದ ಊರಿನ ಜನತೆಗೆ ಪುಣ್ಯ ಬರಬೇಕು ತಾನೆ? ಇನ್ನೂ ಯಾವುದು ತನ್ನದಲ್ಲದ್ದರಿಂದ ಪೂಜೆ ಮಾಡಿದ ಪೂಜಾರಿಗೆ ಪುಣ್ಯ ಬರುತ್ತದೆಯೇ? ಹೂವು, ನೀರು ಎಲ್ಲವೂ ಪ್ರಕೃತಿಯ ದಾನಗಳು ಶಿವನ ಸೃಷ್ಟಿಯನ್ನು ಅವನಿಗೆ ಕೊಟ್ಟು ಪುಣ್ಯ ಬಾ ಎಂದರೆ ಹೇಗೆ ಬರುತ್ತದೆ ಎನ್ನುತ್ತಾನೆ ಶರಣ ಅಂಬಿಗರ ಚೌಡಯ್ಯ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀ. ವ್ಯಾಪ್ತಿ ನಿರ್ಬಂಧ ವಿಧಿಸಿ ಡಿಸಿ ಮಿಶ್ರಾ ಆದೇಶ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲೆಯಾದ್ಯಂತ ಫೆ.18 ರಂದು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ 6ನೇ ತರಗತಿಗೆ ಪ್ರವೇಶಾತಿಗೆ ಪರೀಕ್ಷೆ ಹಾಗೂ ಸಮಾಜ ಕಲ್ಯಾಣ-ಹಿಂದುಳಿದ ವರ್ಗಗಳ ಇಲಾಖೆಯಿಂದ ಯುಪಿಎಸ್‌ಸಿ, ಕೆಎಎಸ್, ಗ್ರೂಪ್-ಸಿ, ಎಸ್‌ಎಸ್‌ಸಿ, ಬ್ಯಾಂಕಿಂಗ್, ಆರ್‌ಆರ್‌ಬಿ ಹುದ್ದೆಗಳಿಗೆ ನೀಡಲಾಗುವ ತರಬೇತಿಗೆ ಪ್ರವೇಶ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಒಳಗಿನ ಆವರಣವನ್ನು ಸಿ.ಆರ್.ಪಿ.ಸಿ. ಕಲಂ 144ರ ಮೇರೆಗೆ ನಿರ್ಬಂಧಿತ ಪ್ರದೇಶವೆಂದು ಎಂದು ಜಿಲ್ಲಾ ದಂಡಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಫೆ.18 ರಂದು ವಸತಿ ಶಾಲೆಗಳ 6ನೇ ತರಗತಿಗೆ ಪ್ರವೇಶಾತಿಗೆ ಪರೀಕ್ಷೆ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ಮತ್ತು ಸಮಾಜ ಕಲ್ಯಾಣ-ಹಿಂದುಳಿದ ವರ್ಗಗಳ ಇಲಾಖೆಯಿಂದ ಯುಪಿಎಸ್‌ಸಿ, ಕೆಎಎಸ್, ಗ್ರೂಪ್-ಸಿ, ಎಸ್‌ಎಸ್‌ಸಿ, ಬ್ಯಾಂಕಿಂಗ್, ಆರ್‌ಆರ್‌ಬಿ ಹುದ್ದೆಗಳಿಗೆ ನೀಡಲಾಗುವ ತರಬೇತಿಗೆ ಪ್ರವೇಶ ಪರೀಕ್ಷೆಗಳು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ಹಾಗೂ ಮಧ್ಯಾಹ್ನ 02.30 ರಿಂದ ಸಂಜೆ 04.30 ರ ವರೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವತಿಯಿಂದ ಜಿಲ್ಲೆಯ ಒಟ್ಟು 20 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿದ್ದು, ಆ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವನ್ನು ನಿಷೇಧಿಸಿದೆ.

ಆಯಾ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನಲ್ಲಿರುವ ಜೆರಾಕ್ಸ್ ಸೆಂಟರ್ ಮತ್ತು ಇಂಟರ್‌ನೆಟ್ ಸೆಂಟರ್‌ಗಳನ್ನು ಮುಚ್ಚುವಂತೆಯೂ ಮತ್ತು ಈ ಆದೇಶವು ಪರೀಕ್ಷಾ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ ಎಂದು ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.


**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.


ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 9448633038


# ಪರೀಕ್ಷೆಗಳ ಫಲಿತಾಂಶ ನಮ್ಮ ಕೈಲಿದೆ

ಪರೀಕ್ಷಾ ಸಮಯ ವಿದ್ಯಾರ್ಥಿಗಳ ಜೀವನದಲ್ಲಿ ಅತ್ಯಂತ ಸಂದಿಗ್ಧ ಅವಧಿ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪರೀಕ್ಷೆಗೆ ಅತ್ಯಂತ ಮಹತ್ವವಿದೆ. ಹಾಗಾಗಿ ಪ್ರತಿ ಶೈಕ್ಷಣಿಕ ವರ್ಷದ ಅಂತಿಮ ಮಾಸಗಳು ಹತ್ತಿರವಾದಂತೆ ಮಕ್ಕಳು ಒತ್ತಡಕ್ಕೆ ಒಳಗಾಗಲು ಪ್ರಾರಂಭಿಸುತ್ತಾರೆ. ಚೆನ್ನಾಗಿ ಸಿದ್ದತೆ ಮಾಡಿಕೊಂಡವರು ಕೂಡಾ ಕೆಲವು ಸಾರಿ ವೈಫಲ್ಯದ ಸುಳಿಗೆ ಸಿಲುಕುವುದುಂಟು. ಅನೇಕರು ಊಟ ಬಿಡುತ್ತಾರೆ, ನಿದ್ರೆ ತೂರೆಯುತ್ತಾರೆ, ಅನಾರೋಗ್ಯಕ್ಕೆ ಒಳಗಾಗಿ ವರ್ಷದ ಭವಿಷ್ಯವನ್ನು ತಾವೇ ಹಾಳುಮಾಡಿಕೂಳ್ಳುತ್ತಾರೆ. ಇವಕ್ಕೆಲ್ಲೆ ಮೂಲ ಕಾರಣ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿರುವ ಅಂಕಗಳ ಮಹತ್ವ. ಪೋಷಕರು ಕನಸಿನ ಗೋಪುರ ಕಟ್ಟಲು ಮಕ್ಕಳಮೇಲೆ ವಿಪರೀತ ಒತ್ತಡ ಹಾಕುತ್ತಾರೆ. ಇದರಿಂದ ವಿದ್ಯಾರ್ಥಿಗಳಲ್ಲಿ ಭಯ ಪ್ರಾರಂಭವಾಗುತ್ತದೆ. ಸರಿಯಾದ ಮಾರ್ಗದರ್ಶನ ದೊರೆಯದೆ ನಿರಾಸೆಕಾರ್ಮೋಡ ಅವರನ್ನು ಆವರಿಸುತ್ತದೆ. ಅದರಿಂದ ಹೊರ ಬರಲಾಗದೆ ಪರೀಕ್ಷೆ ಬರೆಯುತ್ತಾರೆ. ಪರಿಣಾಮ ಹೇಳಿದ್ದು ಒಂದು. . . . ಆಗಿದ್ದು ಮತ್ತೊಂದು ಎಂಬಂತೆ ಫಲಿತಾಂಶ ಬರುತ್ತದೆ.



**ಪರೀಕ್ಷಾ ಭಯ. . . . .**

ಪರೀಕ್ಷೆ ಕಾಲ ಶುರುವಾದರೆ ಮಕ್ಕಳಲ್ಲಿ ಖಿನ್ನತೆ ಮೂಡಿ, ಭಯ ಭೀತರಾಗುತ್ತಾರೆ ಎಂಬುದು ಎಲ್ಲರಿಗೂ ಅನ್ವಯಿಸುವ ಮಾತು. ಸರಿಯಾಗಿ ಆಲೋಚಿಸಿದಲ್ಲಿ ಅದಕ್ಕೆ ಉತ್ತರ ಸಿಗುತ್ತದೆ. ಯಾಕೆ ಈ ರೀತಿ ಮಕ್ಕಳಲ್ಲಿ ಉಂಟಾಗುತ್ತದೆ?. ಅವರೇಕೆ ಭಯ ಪಡುತ್ತಾರೆ ?. ಕಾಯಿಲೆಗಳು ಈ ಸಮಯದಲ್ಲೆ ಯಾಕೆ ಕಾಡುತ್ತವೆ ?. ಊಟವೇಕೆ ಸೇರುತ್ತಿಲ್ಲಾ ?. ಇಂತಹ ಅನೇಕ ಪ್ರಶ್ನೆಗಳಿಗೆ ಉತ್ತರ ಉಡುಕುವುದು ಕಷ್ಟವೇನಲ್ಲ. ಆದರೆ ಒಂದಂತೂ ಸತ್ಯ, ಪರೀಕ್ಷೆಗಳಲ್ಲಿ ಶಿಕ್ಷಕರು ಹೇಳಿರುವುದು, ತಾವು ಕಲಿತಿರುವುದು, ಮನೆಯವರು ತಿಳಿಸಿರುವುದು, ಸ್ನೇಹಿತರೊಂದಿಗೆ ಚರ್ಚಿಸಿರುವುದು, ನಿಗದಿ ಪಡಿಸಿದ ಪಠ್ಯಕ್ರಮದಲ್ಲಿರುವುದನ್ನು ಬಿಟ್ಟು ಬೇರೇನು ಇರಲು ಸಾಧ್ಯವಿಲ್ಲ. ಇದನ್ನು ಮಕ್ಕಳು ಮೊದಲು ಸರಿಯಾಗಿ ಅರಿಯಬೇಕು. ಕೆಲವು ವಿಷಯಗಳಲ್ಲಿ ಮಾತ್ರ ಓದಿನ ವ್ಯಾಪ್ತಿ ವಿಶಾಲವಾಗಿರುತ್ತದೆ. ಅಂತಹುದಕ್ಕೆ ಹೊಂದಿಕೊಳ್ಳಬೇಕು.

**ನಿದ್ರೆ ಮರೆವಿನ ಸಮಸ್ಯೆ:-**

ಎಲ್ಲಾ ಮಕ್ಕಳನ್ನು ಕಾಡುವ ರೋಗ. ಅದರಲ್ಲಿಯೂ ಪುಸ್ತಕ ಹಿಡಿದು ಕೂತರೆ ನಿದ್ದೆ ಹತ್ತುತ್ತದೆ. ಆದರೆ ಹಾಸಿಗೆಯ ಮೇಲೆ ಮಲಗಿದಾಗ ನಿದ್ದೆ ಬರುವುದೇ ಇಲ್ಲ! ಪರೀಕ್ಷೆಯ ಫಲಿತಾಂಶ ಏನುಗುವುದೋ ಏನೋ ಎಂಬ ಆತಂಕ ಪುಸ್ತಕ ಹಿಡಿದ ಕೂಡಲೇ ಕಾಡುತ್ತದೆ. ಅದರಿಂದ ಉಂಟಾಗುವ ಭಯ ಈ ರೀತಿ ನಿದ್ದೆಯನ್ನು ಬರಿಸುತ್ತದೆ. ಅನೇಕ ಮಕ್ಕಳು 'ಕಡಿಮೆ ಅಂಕ ಬಂದುಬಿಟ್ಟರೆ ಏನು ಮಾಡಲಿ' ಎಂದು ಯೋಚಿಸುತ್ತಾ ಸಮಯ ವ್ಯಯ ಮಾಡುತ್ತಾರೆ. ಅದರ ಬದಲು 'ಹೆಚ್ಚು ಅಂಕ ಬರಲು ಏನು ಮಾಡಲಿ' ಎಂದು ಯೋಚಿಸುವುದು ಸೂಕ್ತ.

ನನಗೆ ತುಂಬಾ ಮರೆವು. ಚೆನ್ನಾಗಿ ಓದಿದ್ದೆ, ಅಮೇಲೆ ಕೇಳಿದರೆ ನೆನಪೇ ಉಳಿಯಲ್ಲ... ಬಹುತೇಕ ಮಕ್ಕಳ ಸಮಸ್ಯೆ ಇದು. ಹಾಳಾದ್ದು ಪರೀಕ್ಷೆಯ ಸಮಯದಲ್ಲಿ ನೆನಪೆ ಆಗುವುದಿಲ್ಲ. ಈಗ ನೆನೆಪಾಗುತ್ತಿದೆ. ಅಂದ ಮೇಲೆ ಸಮಸ್ಯೆ ನೆನಪಿನ ಶಕ್ತಿಯದಲ್ಲ. ಪರೀಕ್ಷೆಯ ಕೊಠಡಿಯಲ್ಲಿ ಕುಳಿತಿರುವಾಗ ಕಾಡುವ ಆತಂಕದ್ದು. ನೆನಪಿಗೆ ಬರಲಿಲ್ಲ ಎಂದಾಗ ಗಾಬರಿಯಾಗುವ ಬದಲಿಗೆ ನನಗೆ ಎಲ್ಲವೂ ನೆನಪಿಗೆ ಬರುತ್ತಿವೆ ಎಂಬ ಧನಾತ್ಮಕ ಮನೋಭಾವವೇ ಮೆದುಳಿಗೆ ಚೈತನ್ಯವನ್ನು ಕೊಡುತ್ತದೆ.

**ಸಿದ್ಧತೆ ಬೇಕು:-**

ನಮ್ಮ ಅನೇಕ ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದ ಮೊದಲ ದಿನಗಳಲ್ಲೇ ತಪ್ಪು ಹೆಜ್ಜೆಗಳನ್ನಿಡುತ್ತಾರೆ. ಕೊನೆ ಕೊನೆಗೆ ಪ್ರಾಯಶ್ಚಿತ್ತ ಪಡುತ್ತಾರೆ. ಪರೀಕ್ಷೆಗೆ ಶಿಸ್ತುಬದ್ಧವಾಗಿ ಪೂರ್ವ ತಯಾರಿಮಾಡಿಕೊಳ್ಳದೆ " ನಾಳೆ ಓದಿದರಾಯಿತು, ಅದೇನು ದೊಡ್ಡದು. . . . . . ." ಎಂದು ಅಸಡ್ಡೆ ಮಾಡಿ ಬೇಜವಾಬ್ದಾರಿಯಿಂದ ಕಾಲ ನೂಕುವ ಮಕ್ಕಳು ನಂತರ ಪಡುವ ಪರಿಪಾಟಲು ಹೇಳತೀರದು. ಅಂತಹವರಿಗೆ ಸಹಜವಾಗಿ ಆತ್ಮವಿಶ್ವಾಸ ಇರುವುದಿಲ್ಲ. ಅದಕ್ಕೆ ಕಂಡ ಕಂಡ ದೇವರಿಗೆ ಅಡ್ಡ ಬೀಳುವುದರಿಂದಿಡಿದು ಪ್ರಶ್ನೆ ಪತ್ರಿಕೆಗಳನ್ನು ಕದಿಯುವವರೆಗೂ, ಕಾಪಿ ಮಾಡುವುದಕ್ಕೆ ಆಧುನಿಕ ತಂತ್ರಜ್ಞಾನವನ್ನು ಬಳಸುವುದರಿಂದಿಡಿದು ಫಲಿತಾಂಶವನ್ನೇ ಅದಲು ಬದಲು ಮಾಡುವವರೆಗೆ ಅವರು ಹುಡುಕುವ ದಾರಿಗಳು ಅನೇಕ. ಇದರ ಜೊತೆ ಒಂದು ವರ್ಷದ ಕೆಲಸವನ್ನು ಒಂದೇ ಸಮಯಕ್ಕೆ ಮಾಡಲು ಹೇಗೆ ಸಾಧ್ಯವಾಗುವುದಿಲ್ಲವೋ ಹಾಗೆ ಪರೀಕ್ಷೆ ದಿನದಂದು ಹಗಲು ರಾತ್ರಿ ಓದಿ ಅರಗಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೆ ಓದಿದ್ದನ್ನು ಹೊರಹಾಕುವುದು ಸುಲಭವೂ ಅಲ್ಲ.

**ಓದಿನ ಸಮಯ:-**

ಮಕ್ಕಳು ಓದಲು ನಿಗದಿತ ಸಮಯವನ್ನು ಗೊತ್ತುಪಡಿಸಿಕೊಳ್ಳಬೇಕು. ಪ್ರತಿಯೊಂದ ವಿಷಯಕ್ಕೂ ಇಂತಿಷ್ಟು ಸಮಯ ಎಂದು ಮೀಸಲಿಡಿ. ಆಗ ನಿಮ್ಮ ಮನಸ್ಸನ್ನು ಬೇರೆಕಡೆಗೆ ಅಂದರೆ ಟಿ.ವಿ, ಆಟ ಇತ್ಯಾದಿಗಳ ಕಡೆಗೆ ಹರಿಯಬಿಡಬೇಡಿರಿ. ಓದುವ ಸ್ಥಳವು ಪ್ರಶಾಂತ ಮತ್ತು ನಿಮ್ಮದಿ ಕೊಡುವಂತಿರಲಿ. ಅಲ್ಲಿ ಉತ್ತಮ ಗಾಳಿ ಬೆಳಕು ಬರುತ್ತಿರಬೇಕು. ಓದಲು ಕುಳಿತುಕೊಳ್ಳುವಾಗ ಸರಿಯಾಗಿದ ಭಂಗಿಯಲ್ಲಿ ನೇರವಾಗಿ ಕುಳಿತುಕೊಳ್ಳಬೇಕು. ತೂಗಾಡುವ ಕುರ್ಚಿ, ಮಂಚದ ಮೇಲೆ ಮಲಗಿ ಓದುವುದು ತರವಲ್ಲ. ಓದುವ ಪುಸ್ತಕದ ಮೇಲೆ ಲೈಟಿನ ಬೆಳಕು ಪ್ರಖರವಾಗಿ ಬೀಳದಂತಿರಬೇಕು. ಅದರಿಂದ ಕಣ್ಣಿಗೆ ಹಾನಿಯಾಗಬಹುದು. ಹಾಗೆಂದು ತೀರಾ ಮಂದ ದೀಪದಲ್ಲಿ ಓದುವುದು ತರವಲ್ಲ. ಓದುವಾಗ ನಿಮ್ಮ ಕೈಯಲ್ಲಿರುವ ಪುಸ್ತಕ ಮುಖಕ್ಕಿಂತ 1-2 ಇಂಚು ಕೆಳಗಿರಬೇಕು. ಅದರ ಅಕ್ಷರಗಳು ಸ್ಪಷ್ಟವಾಗಿ ಕಾಣುವಂತಿರಲಿ. ಹೆಚ್ಚು ಸಮಯ ಒಂದೇ ಕಡೆ ಕುಳಿತು ಓದುವುದು ನಿಮ್ಮಗಳ ಅಭ್ಯಾಸದ ಮೇಲೆ ಅವಲಂಬಿತವಾಗಿದೆ. ಒಂದು ಗಂಟೆ ಓದಿದ ನಂತರ 1-2 ನಿಮಿಷ ಎದ್ದು ಓಡಾಡುವುದು ಸೂಕ್ತ. ನಂತರ ಮತ್ತೇ ಓದಲು ತೊಡಗಿಕೊಳ್ಳಿ. ಅರ್ಥವಾಗದ ವಿಷಯಗಳನ್ನು ಅನೇಕ ಸಾರಿ ಪುನರಾವರ್ತಿಸಿದರೆ ಅನುಕೂಲವಾಗುತ್ತದೆ.




**ಡಾ.ಪರಮೇಶ್ವರಯ್ಯ ಸೊಪ್ಪಿಮಠ**
ಶಿಕ್ಷಕರು
soppi.mata@gmail.com


**ಸಮಯಪಾಲನೆ:-**

ವಿದ್ಯಾರ್ಥಿ ಜೀವನದಲ್ಲಿ ಕಲಿಕೆಗೆ ಒತ್ತು ಕೊಡಬೇಕು. ಗುಣಮಟ್ಟದ ಓದಿಗೆ ಗಮನ ಕೊಡಬೇಕು. ಆಗ ಸಮಯ ಸಾಲದು ಎಂಬ ಮಾತೇ ಬರುವುದಿಲ್ಲ. ಕಲಿಕೆಗೆ ಒತ್ತು ಕೊಟ್ಟು ಓದಿದಾಗ ಮನಸ್ಸಿನ ಮೇಲೆ ಒತ್ತಡ ಇರುವುದಿಲ್ಲ. ಸಮಯ ಪರಿಪಾಲನೆ ಅತ್ಯಗತ್ಯ. ಅದಕ್ಕೆ ಯಾವುದೇ ಸಮಯದಲ್ಲಿ ನೀವು ಏನಾದರೂ ಮಾಡುತ್ತಿರುವಾಗ ಅದು ಆ ಸಮಯದಲ್ಲಿ ಮಾಡಬೇಕಾದ ಕೆಲಸವೇ ಎಂದು ಪ್ರಶ್ನಿಸಿಕೊಳ್ಳಿ. ಉತ್ತರ ನಿಮಗೆ ಸಮಯವನ್ನು ಸದುಪಯೋಗಪಡಿಸಿಕೊಳ್ಳುತ್ತಿದ್ದೀರಾ ಎಂಬುದನ್ನು ತಿಳಿಸಿಕೊಡುತ್ತದೆ.

**ಪಠ್ಯಕ್ಕೆ ಆದ್ಯತೆ:-**

ವಿದ್ಯಾರ್ಥಿಗಳು ಹೆಚ್ಚು ಪಠ್ಯ ಪುಸ್ತಕಗಳನ್ನು ಅಭ್ಯಾಸ ಮಾಡಬೇಕು. ಯಾರೋ ಮಾತು ಕೇಳಲು ಹೋಗಿ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳಬಾರದು. ಕೆಲವರಂತೂ ಪಠ್ಯ ಪುಸ್ತಕಗಳನ್ನು ಕೊಳ್ಳದೇ ಬರೀ ಗೈಡ್‌ಗಳಿಗೆ ಮೊರೆ ಹೋಗುತ್ತಾರೆ. ಗುಣಮಟ್ಟವಿಲ್ಲದ ಡೈಜೆಸ್ಟ್ ಮೊರೆಹೋದಲ್ಲಿ ಪರೀಕ್ಷೆಯಲ್ಲಿ ಸಂಕಷ್ಟಕ್ಕೆ ಒಳಗಾಗಬೇಕಾಗುತ್ತದೆ. ಶೈಕ್ಷಣಿಕ ವರ್ಷದ ಪ್ರಾರಂಭದಿಂದಲೇ ಯಾವುದನ್ನು ಅನುಸರಿಸಿದರೆ ತಮಗೆ ಸೂಕ್ತ ಎಂಬುದನ್ನು ಖಚಿತಪಡಿಸಿಕೊಂಡು ಆ ನಿಟ್ಟಿನಲ್ಲಿ ಮುನ್ನೆಡೆಯಬೇಕು. ಪರೀಕ್ಷೆ ಹತ್ತಿ ಬಂದಾಗ ಗೊಂದಲಕ್ಕೆ ಒಳಗಾದಲ್ಲಿ ಖಂಡಿತ ಓದುವುದಕ್ಕಾಗುವುದಿಲ್ಲ.

**ಎಲ್ಲರೂ ಜವಾಬ್ದಾರರೂ:-**

ಮನೆಯವರೆಲ್ಲಾ ಮಕ್ಕಳಿಗೆ "ಪರೀಕ್ಷೆ ತುಂಬ ಮುಖ್ಯ, ಅಂಕಗಳೂ ತುಂಬ ಮುಖ್ಯ "ಎಂದು ಒತ್ತಿ ಹೇಳಿ ಹೇಳಿದಾಗ ಅದು ಅವರ ಮನಸ್ಸಿನ ಮೇಲೆ ದೀರ್ಘಕಾಲಿಕ ಪರಿಣಾಮ ಬೀರಿರುತ್ತದೆ. ಪರೀಕ್ಷೆ ಮುಖ್ಯ ಎಂದೆಲ್ಲ ಹೇಳಿ ಅವರ ದಿನನಿತ್ಯದ ಜೀವನದಲ್ಲಿ ಒತ್ತಡಪೂರ್ವಕ ವಾತಾವರಣ ನಿರ್ಮಿಸುತ್ತೇವೆ. ಇದರಿಂದ ಮಕ್ಕಳು ಓದು ಎಂದರೆ ಅದು ಒಂದು ಶಿಕ್ಷೆ ಎಂಬ ತೀರ್ಮಾನಕ್ಕೆ ಬಂದಿರುತ್ತಾರೆ. ಅದಕ್ಕೆ ಮನೆಯವರೂ ಆ ಸಮಯದಲ್ಲಿ ತಮ್ಮ ಪಾತ್ರವನ್ನೂ ಮರೆಯುವಂತಿಲ್ಲ.

ಪರೀಕ್ಷಾ ಸಮಯ ಎಲ್ಲರಿಗೂ ಅಗ್ನಿ ಪರೀಕ್ಷೆಯ ಸಮಯ. ಪರೀಕ್ಷಾ ಸಿದ್ಧತೆಗಳಬಗ್ಗೆ ಎಲ್ಲರಿಗೂ ಜವಾಬ್ದಾರಿಗಳಿರುತ್ತವೆ. ಈ ಹಿನ್ನಲೆಯಲ್ಲಿ ಸರ್ವರೂ ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಬೇಕು. ಪರೀಕ್ಷಾ ದಿನಗಳಲ್ಲಿ ವಿದ್ಯಾರ್ಥಿಗಳನ್ನು ವಿಶೇಷ ಕಾಳಜಿಯಿಂದ ನೋಡಿಕೊಳ್ಳಬೇಕಾಗುತ್ತದೆ. ಎಷ್ಟೇ ನೆಮ್ಮದಿಯಿಂದ ಓದಿಕೊಳ್ಳಬೇಕೆಂದರೂ ಸಹಜವಾಗಿ ಅವರ ಮೇಲೆ ಒತ್ತಡಗಳು ಬೀಳುತ್ತವೆ. ಅವರ ಊಟ, ನಿದ್ರೆ, ವಿಶ್ರಾಂತಿ ಹಾಗು ಮನರಂಜನೆಯಲ್ಲಿ ಒಮ್ಮೆಲೇ ಆದ ವ್ಯತ್ಯಾಸದಿಂದ ಅವರು ಚಿಂತಿತರಾಗಬಹುದು. ರಾತ್ರಿಯೆಲ್ಲಾ ಓದುವಾಗ ಹಸಿವು, ನೀರಡಿಕೆಗಳು ಅವರನ್ನು ಕಾಡಬಹುದು. ಅನಾರೋಗ್ಯ ಉಂಟಾಗಬಹುದು. ಆಗ ತಂದೆ, ತಾಯಿ, ಸಹೋದರ, ಸಹೋದರಿಯರು, ಶಿಕ್ಷಕರು, ಮಿತ್ರರು ಎಲ್ಲರೂ ಅವರಿಗೆ ಧೈರ್ಯತುಂಬಿ ಸಾಧ್ಯವಾದಷ್ಟು ರೀತಿಯಲ್ಲಿ ಅವರಿಗೆ ಸಹಕಾರ-ಸಲಹೆ-ಮಾರ್ಗದರ್ಶನ ಮಾಡಬೇಕು, ಅವರು ಅಂಥ ಕ್ಲಿಷ್ಟ ಸನ್ನಿವೇಷದಲ್ಲಿ ವಿದ್ಯಾರ್ಥಿಗಳನ್ನು ಕಡೆಗಣಿಸಿದರೆ ಅದು ಬೇರೆ ರೀತಿ ಪರಿಣಾಮ ಬೀರುತ್ತದೆ. ಮಕ್ಕಳಿಗೆ ಆತ್ಮವಿಶ್ವಾಸ ತುಂಬುವಂತ ಹೇಳಿಕೆಗಳು, ನಿನ್ನೊಂದಿಗೆ ನಾವಿದ್ದೇವೆ ಎನ್ನುವ ಭರವಸೆಗಳು, ಪರೀಕ್ಷೆ ಮತ್ತು ಗಳಿಸುವ ಅಂಕವೇ ಬದುಕಲ್ಲ ಎನ್ನು ಸಾಂತ್ವಾನದ ನುಡಿಗಳು ಮಕ್ಕಳಿಗೆ ನೂರಾನೆ ಬಲ ಕೊಡುತ್ತವೆ.

**ಒಂದಷ್ಟು ಟಿಪ್ಸ್ ಪರೀಕ್ಷಾ ಮುಂಚೆ**

- ಪಾಠದಷ್ಟೆ ಆಟವೂ ಮುಖ್ಯ.
- ಜಾಣ ವಿದ್ಯಾರ್ಥಿಗಳ ಜೊತೆ ಅಭ್ಯಾಸ ಮಾಡಿರಿ.
- ಪಠ್ಯಪುಸ್ತಕ ಮತ್ತು ನೋಟ್ಸ್‌ಗಳತ್ತ ಹೆಚ್ಚು ಗಮನವಿರಲಿ.
- ಶಿಕ್ಷಕರ ಜೊತೆ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿರಿ
- ಚಿಕ್ಕ ವಿಷಯಕ್ಕೂ ಆದ್ಯತೆ ನೀಡಿ.
- ಹಿಂದಿನ ಪ್ರಶ್ನೆ ಪತ್ರಿಕೆ ಅವಲೋಕಿಸಿರಿ.
- ಪರೀಕ್ಷೆ ಹಿಂದಿನ ದಿನ ಬೇಗ ಮಲಗಿ, ಬೆಳಗ್ಗೆ ಉಲ್ಲಾಸದಿಂದ ಏಳಿರಿ.
- ಪರೀಕ್ಷೆ ಸಮಯಕ್ಕಿಂತ ಮುಂಚೆ ಎಲ್ಲ ಸಾಮಾಗ್ರಿಗಳೊಂದಿಗೆ ಹಾಜರಿರಬೇಕು.

**ಪರೀಕ್ಷೆಯಲ್ಲಿ**

- ಆತ್ಮವಿಶ್ವಾಸದಿಂದ ಉತ್ತರ ಬರೆಯಿರಿ.
- ಕಾಪಿ ಮಾಡುವುದು ಬೇಡ.
- ಶುದ್ಧ ಮತ್ತು ಸ್ಪಷ್ಟ ಬರಹ.
- ಉಪಶೀರ್ಷಿಕೆ ನೀಡಿರಿ.
- ಅವಶ್ಯ ವಿದ್ದಷ್ಟೆ ಉತ್ತರ ಬರೆ.
- ಅಗತ್ಯವಾದಲ್ಲಿ ಚಿತ್ರ ಬಿಡಿಸು.
- ಅನುಕ್ರಮವಾಗಿ ಉತ್ತರಿಸು.

# ಈ ಮೋಹ ನನ್ನನ್ನೇಕೆ ಆವರಿಸಿದೆ.?

ಮೋಹ ಎಂದರೆ ಪ್ರೀತಿ, ಮಮತೆ, ಆಕರ್ಷಣೆ, ಎಂದಾದರೂ ಇನ್ನೊಂದೆಡೆ ಅಜ್ಞಾನ, ಅವಿದ್ಯೆ ಮತ್ತು ಒಳಿತು-ಕೆಡಕಿನ ಪರಿಣಾಮ ಬಿಟ್ಟು ಅಪೇಕ್ಷಿಸಿ ಅನುಸರಿವುದು ಎಂದೂ ಕೂಡಾ ಸಾಂದರ್ಭಿಕವಾಗಿ ಬಳಸಲಾಗುತ್ತದೆ. ವ್ಯಾಮೋಹ ಎಂದರೆ ಅದೇ ಅರ್ಥಗಳ ಹಿಂದೆ 'ಅತೀಯಾದದ್ದು' ಎಂದು ಸೇರಿಸಿಕೊಳ್ಳುವುದು."ರಾಜ ಕಾರಣಿಗಳಿಗೆ ಅಧಿಕಾರದ ಮೋಹ". ಅಥವಾ "ದೃತರಾಷ್ಟ್ರನ ಪುತ್ರ ವ್ಯಾಮೋಹಕ್ಕೆ ಕೌರವ ಕುಲ ನಾಶವಾಯಿತು" ಹೀಗೆ. ಇರಲಿ. ಮೋಹವು ಎಲ್ಲರಲ್ಲೂ ಇರುತ್ತೆ. ವ್ಯಕ್ತಿಗಳ ಮೇಲೆ ಮಾತ್ರ ಮೋಹ ಇರಲಾರದು. ಅದು ಕೆಲವು ವಸ್ತುಗಳಾದ ಹಣ, ಆಭರಣ, ಆಸ್ತಿ, ಅಂತಸ್ತುಗಳ ಮೇಲೂ ಇರುತ್ತೆ. ಮತ್ತೆ ಕೆಲವು, ಸಂಗೀತ, ಕಲೆ, ಅಭಿನಯ, ದುರಾಭ್ಯಾಸ, ಅಧಿಕಾರ, ಪೂಜೆ ಪುನಸ್ಕಾರ, ಧರ್ಮ ಇತ್ಯಾದಿ ಅಭಿರುಚಿಗಳ ಮೇಲೂ ಉಂಟು. ಹೀಗೆ ಪ್ರತಿಯೊಬ್ಬರ ಮೋಹ ವ್ಯಾಮೋಹಗಳು ಬಿನ್ನ ಬಿನ್ನವಾಗಿರುತ್ತವೆ. ಒಂದೊಮ್ಮೆ ಇದು ಅವರವರ ಸಂಸ್ಕಾರದಿಂದಲೂ ಬೆಳೆದು ಬಂದಿರಲೂ ಸಾಕು.

ಒಟ್ಟಾರೆಯಾಗಿ ಹೇಳಬೇಕೆಂದರೆ ಮನುಷ್ಯ ತನಗೆ ಅನುಕೂಲವಾಗುವ ವಲಯದಲ್ಲಿ ಅದನ್ನು ರೂಢಿಸಿಕೊಂಡು ಅದೇ ಸರಿಯಾದದ್ದು ಎಂದು ಬಲವಾಗಿ ನಂಬಿ ಇತರರಿಗೂ ಬೋಧಿಸುತ್ತ ಬದುಕು ಸಾಗಿಸುತ್ತಾನೆ. ಇಂತಹ ಮೋಹಜಾಲ,ಅಥವಾ ಮೋಹಪಾಶಕ್ಕೆ ಸಿಲುಕಿ ಅನೇಕ ಋಷಿಗಳು, ರಾಜ ಮಾಹಾರಾಜರು, ಕಲಾಕಾರರು, ರಾಜಕಾರಣಿಗಳು, ವಿದ್ಯಾರ್ಥಿಗಳು, ಸಂಸಾರಿಕರು ಅನೇಕರು ಬೇರೆಬೇರೆ ರೀತಿಯಲ್ಲಿ ಹಾಳಾಗಿದ್ದುದನ್ನು ಕೇಳುತ್ತೇವೆ ಅಲ್ಲದೆ ವಾಸ್ತವವಾಗಿ ಕಾಣುತ್ತಲೇ ಇದ್ದೇವೆ. ಹಾಗಾದರೆ ಈ ಮೋಹ, ವ್ಯಾಮೋಹಗಳು ನಮ್ಮ ಜೀವನಕ್ಕೆ ಮಾರಕವೆ? ಖಂಡಿತಾ ಅಲ್ಲ. ಮೋಹ ಗುಣ ಮನುಷ್ಯನಿಗೆ ಅವಶ್ಯಕ. ಅದು ಎಷ್ಟಿರಬೇಕು, ಹ್ಯಾಗಿರಬೇಕು ಎನ್ನವುದನ್ನು ಅರಿಯುವುದು ಮುಖ್ಯ. ಭಗವಂತ ಮಾನವರನ್ನು ಸೃಷ್ಟಿಸುವಾಗಲೇ ರಜ, ತಾಮಸ, ಸಾತ್ವಿಕ ಗುಣಗಳನ್ನು ಕೊಟ್ಟು, ಅವುಗಳ ಬಳಕೆ ಹೇಗಿರಬೇಕೆಂದು ಮತ್ತು ಅವುಗಳನ್ನು ನಿಯಂತ್ರಿಸಲು ವಿವೇಚನಾ ಶಕ್ತಿಯನ್ನು ಕೊಟ್ಟಿದ್ದಾನೆ. ಆದರೆ ಮನುಷ್ಯ ತನಗೆ ಅನುಕೂಲವಾಗುವ ಗುಣಗಳನ್ನು ಅಳವಡಿಸಿಕೊಂಡು ಕ್ಷಣಿಕ ಆನಂದಲ್ಲಿ ಮೈ ಮರೆತು ಅದನ್ನೇ ಆನಂದಿಸುತ್ತ, ಕೊನೆಗೆ ದುಃಖವಾದಾಗ ದೇವರನ್ನೋ ಅದೃಷ್ಟವನ್ನೋ ದೂಷಿಸುತ್ತ ಕಾಲ ಕಳೆಯುತ್ತಾನೆ.






**ಲಕುಮಿಸುತ ಸಾರವಾಡ**
**ಹೊಸಪೇಟೆ**


ಇಲ್ಲಿ ನಮ್ಮನ್ನು ನಾವೇ ಪ್ರಶ್ನಿಸಿ ಕೊಳ್ಳಬೇಕು. ಈ ಮೋಹ ನನ್ನನ್ನೇಕೆ ಆವರಿಸಿದೆ.? ಇದರಿಂದ ನನಗೆ, ನನ್ನ ಕುಟುಂಬಕ್ಕೆ, ಸಮಾಜಕ್ಕೆ, ಅಥವಾ ನನ್ನ ಮನಸ್ಸಿಗೆ ಎಷ್ಟರಮಟ್ಟಿಗೆ ಒಳಿತು ಅಥವಾ ಕೆಡಕನ್ನು ಮಾಡುತ್ತದೆ.? ನಾನು ಬದಲಾಗ ಬೇಕೆ? ಬೇಡವೆ? ಆಗ ಉತ್ತರ ಕಂಡು ಕೊಳ್ಳಲು ಕೆಲವೊಮ್ಮೆ ಗೊಂದಲಗಳೂ ಆಗಬಹುದು. ಎಲ್ಲರನ್ನೂ ತಿದ್ದಲು ಭಗವಂತನ ಹೊರತಾಗಿ ಯಾರಿಂದಲೂ ಸಾಧ್ಯವಿಲ್ಲ. ಆದರೆ ನಮ್ಮನ್ನು ನಾವು ಅರಿತು ತಿದ್ದಿಕೊಳ್ಳಲು ಖಂಡಿತಾ ಸಾಧ್ಯ. ಯಶಸ್ವಿಯಾದರೆ ಅವನೇ ಸಾಧಕ. ಈ ಸಾಧನಾ ಮಾರ್ಗದಲ್ಲಿ ಗುರುವಿನ ಮಾರ್ಗದರ್ಶನ ಪಡೆದು ದೇವ ಕರುಣಿಸಿದ ಎಲ್ಲ ಗುಣಗಳನ್ನು ಸಮಯೋಚಿತವಾದ ಸದ್ಬಳಕೆಯಿಂದ ಬದುಕು ಸಾಗಿಸಿದರೆ ಯಾವ ಮೋಹ ಪಾಶಕ್ಕೆ ಸಿಲುಕದೇ ಸದ್ಗತಿಯನ್ನು ಹೊಂದಬಹುದು.

## ಕವಿ ಮನಸು

### ಬಸವಣ್ಣ ಪ್ರಜಾ ಧರ್ಮ ಪ್ರವಾದಿ

ಅದೋ.. ಗಗನದ ಧರ್ಮತಾರೆ
ಅದು ಹನ್ನೆರಡನೆ ಶತಕದಲಿ
ಕರ್ನಾಟಕದ ಧರೆಗಿಳಿದು ಬಂತು
ಕನ್ನಡದ ಪುಣ್ಯ ಭೂಮಿಯಲಿ
ಗುರುಬಸವ ಕಲ್ಯಾಣ ರಾಜ್ಯ ತಂತು

ಕೇಸರೀ ಸನಾತನ ಪುರಾತನ
ವರ್ಣಾಶ್ರಮ ಅಸಮತೋಲನಕೆ
ಶೋಷಿತ ದ್ರಾವಿಡರ ಆಕ್ರಂದನ
ಹಿಡಿ ಹಿಟ್ಟು ಬೋಗಸೆ ನೀರಿಗೇ
ಬಸವಳಿದು ಬೆಂಡಾಗಿ ಬೆತ್ತಲಾಗಿತ್ತು

ಸ್ಪಂಧನೆಯ ಸಮಭಾವವೇ ಅಲ್ಲಿಲ್ಲ
ಭೇದ ಭಾವ ಮೇಲು ಕೀಳೇ ಎಲ್ಲಾ
ಗರಿಷ್ಠ ಕನಿಷ್ಠ ಧೋರಣೆಯಲಿ
ಮೇಲ್ವರ್ಗದ ದಬ್ಬಾಳಿಕೆ ಮೆರೆದು
ದುಡಿತ ದ್ರಾವಿಡರ ಬದುಕು ದುಸ್ತರವಿತ್ತು

ದಲಿತ ಶೂದ್ರರ ಕಣ್ಣೀರ ವರೆಸಲು
ಸ್ಥಾಪಿತ ಉಚ್ಚ ನೀಚ ಭೇದ ಕಳೆಯಲು
ಸವರ್ಣಿಯರ ಅಟ್ಟಹಾಸ ತಡೆಯಲು
ಬೆವರ ಜನಪರ ಧ್ವನಿಯಾಗಲು
ಬಸವ ಭುವನ ಭಾಗ್ಯ ಬರಬೇಕಿತ್ತು

ಅಸಮತೆಯನು ಮೆಟ್ಟಿ ನಿಲ್ಲುತ
ಜಾತಿ ಜಡ ಜಾಡ್ಯತೆ ತೊರೆಯುತ
ದೇಹವೇ ದೇವ ದೇಗುಲ ಅರುಹುತ
ಹುಟ್ಟು ಸಾವ ದೇವರನು ವರ್ಜಿಸುತ
ಲಿಂಗದೇವ ಕುರುಹ ಲಿಂಗ ಅರ್ಚಿಸುವ
ಸುಂದರ ಸಮತಾ ಸಮಾಜ ನೆಲೆಸುತ

ಎಲ್ಲರ ಕಾಯಕ ದಾಸೋಹ ಪ್ರಸಾಧವೆಂದು
ಶ್ರಮಿಕ ಕಾಯಕವಂತರ ಬೆಲೆಯೆಂದು
ಶರಣರ ನಡೆನುಡಿ ವಚನ ಸಿದ್ಧಿಯೆಂದು
ಅನುಭವ ಮಂಟಪ ಸಾಕಾರಗೊಂಡಿತು

ಇಳೆಯಲಿ ಆತನಕ ಧ್ವನಿಯಾಗದಿದ್ದ
ಪ್ರಪ್ರಥಮ ಪ್ರಜಾ ಧ್ವನಿ ಶರಣ ಮಾರ್ಧನಿ
ಕನ್ನಡ ನಾಡಲಿ ಲಿಂಗಾಯತ ಧರ್ಮ
ಆಕರವಾಯ್ತು
ವಿಶ್ವಗುರು ಬಸವಣ್ಣ ಆದರು ಧರ್ಮ
ಪ್ರವಾಧಿ
ಆವರಿಂದು ಕರ್ನಾಟಕದ ಸಾಂಸ್ಕೃತಿಕ
ನಾಯಕ

ಅದೋ.. ಗಗನದ ಧರ್ಮ ತಾರೆ ಅದು
ಹನ್ನೆರಡನೆ ಶತಕದಲಿ
ಕರ್ನಾಟಕದ ಧರೆಗಿಳಿದು ಬಂತು
ಕನ್ನಡದ ಪುಣ್ಯ ಭೂಮಿಯಲಿ
ಗುರುಬಸವರ ಕಲ್ಯಾಣ ರಾಜ್ಯ ತಂತು

– ಸೋ.ದಾ.ವಿರೂಪಾಕ್ಷಗೌಡ
ಹೊಸಪೇಟೆ.


# ಬಸವಣ್ಣ ಮತ್ತು ಸಮಾಜವಾದ

ಈ ಚಿಕ್ಕ ಲೇಖನದ ಉದ್ದೇಶ ಬಸವ ತತ್ವಗಳಲ್ಲಿ ಸಮಾಜವಾದವಿದೆ ಎಂದು ಶೋಧಿಸುವುದು. ಈ ಶೋಧನೆ ಹೊಸದಲ್ಲ. ಹಲವಾರು ಚಿಂತಕರು ಮಾಡಿದ್ದಾರೆ. ಭಾರತದ ಮಟ್ಟಿಗೆ ಹೇಳುವುದಾದರೆ ಬುದ್ಧನೇ ಮೊದಲ ಸಮಾಜವಾಗಿಯಾಗಿ ಬಾಳಿದವನು. ನಂತರ ಕನ್ನಡದ ಬಸವಣ್ಣ. ಬಸವಣ್ಣನೂ ಕನ್ನಡದ ಮೊದಲ ಸಮಾಜವಾದಿಯಾಗಿದ್ದ. ತನ್ನ ತತ್ವಾದರ್ಶಗಳಲ್ಲಿ ಸಮಾಜವಾದವನ್ನು ಬೋಧಿಸಿದನು. 19ನೇ ಶತಮಾನದಲ್ಲಿ ಕಾರ್ಲ್‌ಮಾರ್ಕ್ಸ್ (1818) ಹುಟ್ಟಿದ ಮೇಲೆ ಆತನ ರಾಜಕೀಯ ತತ್ವಗಳು ಬಹಳ ಪ್ರಸಿದ್ಧವಾದವು. ಹೊಸ ಆರ್ಥಿಕ ವ್ಯವಸ್ಥೆಯ ರೂವಾರಿ ಎಂದು ಆತನನ್ನು ಪ್ರಶಂಸಿಸಲಾಯಿತು. ಸಮಾಜವಾದವೇ ಆತನ ತತ್ವಗಳ ಪ್ರಧಾನ ನೆಲೆಯಾಗಿತ್ತು. ಇತಿಹಾಸದ ಮತ್ತು ಆ ಮೂಲಕ ಸಮಾಜದ ಗತಿಯನ್ನು ಬದಲಿಸುವ ಶಕ್ತಿ ಆರ್ಥಿಕತೆಗಿದೆ. ಸಮಾಜದಲ್ಲಿ ಶ್ರೀಮಂತರು ಮತ್ತು ದುಡಿಮೆಗಾರರು ಎಂಬ ಎರಡು ವರ್ಗಗಳು ನಿರ್ಮಾಣವಾಗಿವೆ. ಇವು ಸಂಘರ್ಷದಲ್ಲಿ ತೊಡಗಿವೆ. ಕಾರಣ ಶ್ರೀಮಂತರ ಬಂಡವಾಳದಿಂದ ಉತ್ಪಾದನೆಗೆ ಶ್ರಮಿಸುವ ದುಡಿವ ವರ್ಗದ ಏಳ್ಗೆಯನ್ನು ಈ ವ್ಯವಸ್ಥೆಯಲ್ಲಿ ಕಾಣುವುದು ಸಾಧ್ಯವಿಲ್ಲ. ಶ್ರೀಮಂತರ ಶ್ರೀಮಂತಿಕೆ ಬಲಗೊಳ್ಳುತ್ತಲೇ ಇರುತ್ತದೆ. ದುಡಿಮೆಗಾರರ ಶ್ರಮಕ್ಕೆ ಹೆಚ್ಚಿನ ಬೆಲೆ ಸಿಗದೆ ಯಥಾಸ್ಥಿತಿಯಲ್ಲಿರುವಂತಾಗುತ್ತದೆ. ಇದನ್ನು ಸರಿಪಡಿಸಲು ಸಮಾಜವಾದ ಬೇಕು ಎಂದು ಕಾರ್ಲ್‌ಮಾರ್ಕ್ಸ್ ಪ್ರತಿಪಾದಿಸಿದ. ಈ ವಾದ ತತ್ವವಾಗಿ ಬೆಳೆಯಿತು. ಕಾರ್ಯಗತವಾಗುವುದು ಇಲ್ಲಿತನಕವಾಗಿಲ್ಲ. ಗಾಂಧೀ, ಲೋಹಿಯಾ, ಅಂಬೇಡ್ಕರ್ ಕೂಡ ಭಾರತದ ಸಮುದಾಯಗಳನ್ನು, ಸಂಸ್ಕೃತಿಯನ್ನು ಗಮನಿಸಿ ಈ ವಾದವನ್ನು ಬೆಂಬಲಿಸಿದರು. ತಮ್ಮದೇ ಆತನ ಚಿಂತನೆಗಳಿಂದ ಮರು ರೂಪಿಸಿದರು ಎಂದರೆ ತಪ್ಪಾಗಲಾರದು. ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರಕಾರ ಬುದ್ಧನ ತತ್ವಗಳಲ್ಲಿ ಸಮಾಜವಾದದ ಬೇರುಗಳು ಶಕ್ತವಾಗಿವೆ ಎಂದು ಹೇಳುತ್ತಾರೆ. (ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್) ಬಸವಣ್ಣನ ಪರಿಚಯ ಅಂಬೇಡ್ಕರ್ ಅವರಿಗೆ ಇದ್ದಿದ್ದರೆ, ಬಸವಣ್ಣನ ಸಮಾಜವಾದವನ್ನು ಮೆಚ್ಚುತ್ತಿದ್ದರು, ಇರಲಿ.

ಬುದ್ಧನ ತತ್ವಗಳಲ್ಲಿ ಖಾಸಗಿ ಒಡೆತನದಿಂದ ಒಂದು ವರ್ಗಕ್ಕೆ ಅಧಿಕಾರ ಸಿಗುತ್ತದೆ. ಇನ್ನೊಂದು ವರ್ಗಕ್ಕೆ ಬಡತನ ಕಾಡುತ್ತದೆ. ದುಃಖಕ್ಕೆ ದಾರಿಯಾಗುತ್ತದೆ. ಶ್ರೀಮಂತರ ವರ್ಗ, ಬಡವರ ವರ್ಗದ ನಡುವೆ ತಾರತಮ್ಯ ಬೆಳೆಯುತ್ತದೆ. ಎಲ್ಲ ಮನುಷ್ಯರು ಸಮಾನರು. ಹುಟ್ಟಿನಿಂದ ಯಾವ ಮನುಷ್ಯನ ಶ್ರೇಷ್ಠತೆಯನ್ನು ಅಳೆಯಬಾರದು. ಮನುಷ್ಯನ ಅರ್ಹತೆ ಸಾಧನೆಯೇ ಮಾನದಂಡವಾಗಬೇಕು. ಧಮವೇ ಎಲ್ಲದಕ್ಕೂ ಮೂಲ ಎಂದು ಪರಿಗಣಿಸಬಾರದು ಎಂದು ಬುದ್ಧ ಹೇಳಿದ. ಈ ಬುದ್ಧ ತತ್ವಗಳು ಭಕ್ತಿ ಚಳುವಳಿಯಲ್ಲಿ ಆದ್ಯತೆ ಪಡೆದಿವೆ. ವಚನಕಾರರು ಬುದ್ಧ ತತ್ವಗಳಿಗೆ ಹೋಲುವ ತತ್ವಗಳನ್ನು ವಚನಗಳಲ್ಲಿ ಕಾಣುತ್ತವೆ. ಬುದ್ಧ, ಬಸವಣ್ಣ ಸಂಸ್ಕೃತಿ ಚಿಂತಕರು. ಮನುಷ್ಯ ಬದುಕಿನ ಸಮಗ್ರ ಏಳಿಗೆಗೆ ನೇರವಾಗುವ ಹೋರಾಟ ಇವರದಾಗಿತ್ತು.

**ಬಸವಣ್ಣನ ಒಂದು ಸರಳ ವಚನ ಹೀಗಿದೆ :**
**ಇವನಾರವ**
**ಇವನಾರವ**
**ಇವನಾರವನೆಂದೆನಿಸದಿರಯ್ಯಾ**
**ಇವ ನಮ್ಮವ**
**ಇವ ನಮ್ಮವ**
**ಇವ ನಮ್ಮವನೆಂದೆನಿಸಯ್ಯಾ**
**ಕೂಡಲ ಸಂಗಮದೇವಾ**
**ನಿಮ್ಮ ಮನೆಯ ಮಗನೆಂದೆನಿಸಯ್ಯಾ (ಬಸವಣ್ಣ)**

ನಮ್ಮ ದೇಶ – ನಮ್ಮ ನಾಡು ಅಸಂಖ್ಯಾತ ಜಾತಿ, ಉಪಜಾತಿ, ಧರ್ಮ, ಮತಗಳಿಂದ ತುಂಬಿ ಹೋಗಿವೆ. ಅದರಲ್ಲೂ ವೈದಿಕ ಧರ್ಮ ನಾಲ್ಕು ವರ್ಣಗಳಲ್ಲಿ ಮನುಷ್ಯ ಸಮುದಾಯಗಳನ್ನು ಒಡೆದು ಹಾಕಿ ಒಂದೊಂದು ವರ್ಣಕ್ಕೆ ಒಂದೊಂದು ನೀತಿಯನ್ನು ವಿಧಿಸಿ, ತಾನು ಮೊದಲ ಸ್ಥಾನದಲ್ಲಿ ನಿಂತು ಆಳ್ವಿಕೆ ನಡೆಸುತ್ತ ಕೊನೆಯ ವರ್ಣವಾದ ಶೂದ್ರರನ್ನು ಕನಿಷ್ಠ ಗೌರವ ಕಲ್ಪಿಸದೆ ಶೋಷಣೆಗೆ ಗುರಿ ಮಾಡಿತ್ತು. ಈ ನೀತಿಯನ್ನು ವಿರೋಧಿಸಿದವನು ಬುದ್ಧ. ಆಳುವ ಪ್ರಭುತ್ವಗಳೊಂದಿಗೆ ಸಖ್ಯ ಬೆಳೆಸಿಕೊಂಡಿರುತ್ತಿದ್ದ ಪುರೋಹಿತಶಾಹಿ ತನ್ನ ಬೆಂಬಲಕ್ಕೆ ರಾಜನನ್ನು ಹೊಂದಿತ್ತು. ಬುದ್ಧ ದೇವರಿಲ್ಲದ ಧರ್ಮವನ್ನು ರೂಪಿಸಿದ್ದ. ದೇವರನ್ನು ಧರ್ಮದ ಕೇಂದ್ರವಾಗಿ ನಿಲ್ಲಿಸುವುದು ಉಚಿತವಲ್ಲ ಎಂದು ಸಾಧಿಸಿದ. ಮನುಷ್ಯನ ಉದ್ಧಾರಕ್ಕೆ ಧರ್ಮ ಮುಖ್ಯವಲ್ಲ. ನಿಜವಾದ ಧರ್ಮ ಮನುಷ್ಯನ ಹೃದಯದಲ್ಲಿದೆ, ಬರೆದಿಟ್ಟ ಶಾಸ್ತ್ರಗಳಲ್ಲಿ ಇಲ್ಲ ಎಂದು ಬುದ್ಧ ಹೇಳುತ್ತಿದ್ದ. ಬುದ್ಧನನ್ನು ನೀಗಿಸಿಕೊಂಡು ವೈದಿಕ ಧರ್ಮ ತನ್ನ ಹಿಡಿತವನ್ನು ಧರ್ಮ, ಸಮಾಜದ ಮೇಲೆ ಸಾಧಿಸುತ್ತಾ ಬಂತು. 12ನೇ ಶತಮಾನದಲ್ಲಿ ಭಕ್ತಿ ಚಳುವಳಿಯಿಂದ





**ಡಾ. ಅಮರೇಶ ನುಗಡೋಣಿ**
**ಲೇಖಕರು, ಹೊಸಪೇಟೆ**
**ಮೊ:9481569459**

ರೂಪಗೊಂಡ ವಚನ ಚಳುವಳಿಯಲ್ಲಿ ಕಾಣಿಸಿಕೊಂಡು ಬಸವಣ್ಣ ಈ ನೆಲದ ಸಂಸ್ಕೃತಿಯನ್ನು ಬಲ್ಲವನಾಗಿದ್ದ. ನಿಕೃಷ್ಟವಾಗಿ ಬದುಕುತ್ತಿದ್ದ ಶೂದ್ರ ವರ್ಗವನ್ನು ಕೈಹಿಡಿದ. ವೈದಿಕ ಧರ್ಮವನ್ನು, ಅದರ ತಾರತಮ್ಯ ನೀತಿಯನ್ನು ಕಠಿಣ ಮಾತುಗಳಲ್ಲಿ ಖಂಡಿಸಿ ವಿರೋಧಿಸುತ್ತ ಹೊಸ ಸಮಾಜವನ್ನು ರೂಪಿಸಲು ತೊಡಗಿದ. ಜಾತಿಗಳು, ಅಸ್ಪೃಶ್ಯತೆ ಇರುವ ತನಕ ಸಮಾಜದಲ್ಲಿ ಸಮಾನತೆ ತರಲು ಯಾರಿಂದಲೂ ಸಾಧ್ಯವಿಲ್ಲವೆಂದು ಮನಗಂಡ ಪರಿಣಾಮವೇ ಜಾತಿನಾಶ ತತ್ವ, ಲಿಂಗ ಸಮಾನತೆ ತತ್ವ, ವೃತ್ತಿ ಸಮಾನತೆ ತತ್ವಗಳನ್ನು ನೆಲೆಗೊಳಿಸಲು ಬಹುದೊಡ್ಡ ಚಳುವಳಿಯನ್ನೇ ರೂಪಿಸಿದ. ಈ ತತ್ವಗಳಲ್ಲಿ ಅಡಗಿತ್ತು ಸಮಾಜವಾದ. ಬುದ್ಧ ಹೇಳುತ್ತಿದ್ದ ಆರ್ಥಿಕ ಸಮಾನತೆಯೇ ಸಮಾಜದ ದುಃಖವನ್ನು ನೀಗಿಸಬಲ್ಲದು. ಬಸವಣ್ಣ ನಿರೂಪಿಸಿದ ಕಾಯಕ ತತ್ವ, ದಾಸೋಹ ತತ್ವಗಳು ಸಮಾಜವಾದದ ಬೆನ್ನೆಲುಬು ಆಗಿದ್ದವು. ಕಲ್ಯಾಣದಲ್ಲಿ ಬಸವಣ್ಣ ಕಾಯಕ್ಕೆ ನೀಡಿದ ಮಹತ್ವ ಸಣ್ಣದಲ್ಲ. ವೃತ್ತಿಗಳು ಬಲಗೊಂಡು ಆರ್ಥಿಕ ಸ್ವಾತಂತ್ರ್ಯಕ್ಕೆ ದಾರಿ ಮಾಡಿತು. ಬಂಡವಾಳಗಳಿಗೆ ಇಲ್ಲಿ ಸ್ಥಾನವಿಲ್ಲ. ಸಣ್ಣ ಬಂಡವಾಳವೂ ಬೇಕಿರಲಿಲ್ಲ. ವ್ಯಕ್ತಿ ತನ್ನ ದೈಹಿಕ ಸಾಮರ್ಥ್ಯದಿಂದ, ಶ್ರಮದಿಂದ ನಿರ್ವಹಿಸುವ ಕಾಯಕಗಳು ಹುಟ್ಟಿಕೊಂಡವು. ಆಯ್ದಕ್ಕಿ ಲಕ್ಕಮ್ಮ–ಮಾರಯ್ಯನ ಕಾಯಕಕ್ಕೆ ಬಂಡವಾಳ ಬೇಕಿಲ್ಲ. ವೃತ್ತಿಯಿಂದ ವ್ಯಕ್ತಿ ತನ್ನ ಕುಟುಂಬದ ನಿರ್ವಹಣೆಗಾಗುವಷ್ಟೇ ಗಳಿಸಬೇಕು. ಹೆಚ್ಚು ಗಳಿಕೆಯಾದರೆ ದಾಸೋಹ ತತ್ವವನ್ನು ಅನುಸರಿಸಬೇಕು. ಸಮಾಜಕ್ಕೆ ವಿನಿಯೋಗಿಸಬೇಕು. ಅಸಂಗ್ರಹ ತತ್ವವೂ ಇಲ್ಲಿದೆ. ಇದು ಬಸವಣ್ಣನವರ ಸಮಾಜವಾದ.

ಲಿಂಗ ಸಮಾನತೆಯೂ ಸಮಾಜವಾದದ ಒಂದು ಮುಖ. 'ಸತಿಪತಿಗಳು ಒಂದಾದ ಭಕ್ತಿ ಶಿವನಿಗೆ ಹಿತ ಸಂತಸ' ಈ ಮಾತನ್ನು ಜೇಡರ ದಾಸಿಮಯ್ಯ ಹೇಳಿದ್ದು. ವಚನ ಚಳುವಳಿಯ ತತ್ವಗಳಲ್ಲಿ ಇದು ಪ್ರಮುಖವಾದದ್ದು. ಎಲ್ಲ ವಚನಕಾರರು ಮುಕ್ತ ಮನಸ್ಸಿನಿಂದ ಲಿಂಗ ಸಮಾನತೆಗೆ ಬೆಂಬಲವಿತ್ತು ಬೆಳೆಸಿದರು. ಮಹಿಳೆಯ ಮರು ಮದುವೆಗೂ ಒಪ್ಪಿ ಆಗು ಮಾಡಲಾಗಿತ್ತು. ಜಾತಿನಾಶ ತತ್ವವನ್ನು ಎಲ್ಲ ವಚನಕಾರರು ನಿರೂಪಿಸಿದ್ದಾರೆ. ಜಾತಿ ಸಮಾಜವಾಗಿದ್ದ ಈ ನೆಲದಲ್ಲಿ ಮೊದಲ ಸಲ ಬಸವಣ್ಣ ನಿಷ್ಠುರವಾಗಿ ಜಾತಿವಾದವನ್ನು ಖಂಡಿಸಿದ. ಧೂಳಯ್ಯನನ್ನು ಅಪ್ಪಿಕೊಂಡು ತೋರಿಸಿದ. ಜಾತಿ ಸಮಾನತೆ, ಲಿಂಗ ಸಮಾನತೆ, ವೃತ್ತಿ ಸಮಾನತೆ ಇವು ಬಸವಣ್ಣನ ಪ್ರಮುಖ ತತ್ವಗಳು. ಈ ತತ್ವಗಳು ಜಾರಿಯಾದರೆ ಅದೇ ಸಮಾಜವಾದ

**'ಇವನಾರವನೆಂದೆನಿಸದಿರಯ್ಯ'**
**'ಇವ ನಮ್ಮವನೆಂದೆನಿಸಯ್ಯ'**
**'ನಿಮ್ಮ ಮನೆಯಮಗನೆಂದೆನಿಸಯ್ಯ'**

ಈ ಮಾತುಗಳು ಸರಳವಾಗಿವೆ, ಕೇಳಲು ಸಾಧಿಸಲು ತಪಸ್ಸೇ ಮಾಡಬೇಕು. ಮನುಷ್ಯನನ್ನು ಇನ್ನೊಬ್ಬ ಮನುಷ್ಯ, ಒಂದು ಮನುಷ್ಯ ಗುಂಪು ಇನ್ನೊಂದು ಮನುಷ್ಯ ಗುಂಪನ್ನು 'ಇವನಾರು'? ಎಂದು ಭಾವಿಸಿದರೆ ನಮ್ಮ ಸಮಾಜದಲ್ಲಿ ಸಮಾನತೆ ಹೇ ಗೆ ಬರಲು ಸಾಧ್ಯ? 'ನಮ್ಮವನು' ಎಂದು ಭಾವಿಸಿದರೆ ಮಾತ್ರ ನಮ್ಮ ಸಮಾಜದಲ್ಲಿ ಸಮಾಣತೆ ಬರಲು ಸಾಧ್ಯ! 'ನಿಮ್ಮ ಮನೆಯ ಮಗ' ಎಂದು ಭಾವಿಸಿದರೆ ಅಸಮಾನತೆಗೆ ಎಲ್ಲಿ ಸ್ಥಾನ ಉಳಿಯುತ್ತದೆ. ಎಲ್ಲರೂ ದೇವರು ಮನೆಯ ಮಕ್ಕಳು ಎನ್ನುವಂತಾದರೆ ದ್ವೇಷಕ್ಕೆ ಜಾಗವಿರಲಾರದೇನೋ!

ಬುದ್ಧ, ಬಸವ, ಕನಕ, ಗಾಂಧೀ, ಅಂಬೇಡ್ಕರ್, ಲೋಹಿಯಾ ಎಲ್ಲ ದಾರ್ಶನಿಕರು ಸಮಾನತೆ ಸಮಾಜವಾದ ತತ್ವವನ್ನು ನಿಷ್ಠುರತೆಯಿಂದ ಪ್ರತಿಪಾದಿಸಿದರು. ಚರಿತ್ರೆಯುದ್ದಕ್ಕೂ ಈ ತತ್ವವನ್ನು ಬೋಧಿಸುತ್ತಲೇ ಬಂದರು.

ಆದರೆ ನಮ್ಮ ಸಮಾಜ ಮನುಷ್ಯರು ಬದಲಾಗಿದ್ದಾರೆಯೇ? ಈ ತತ್ವದ ವಿರುದ್ಧವಾಗಿ ನಿಂತಿದೆ. ಸಮಾಜ– ಮನುಷ್ಯ ಇದರಿಂದಾಗಿಯೇ ದುರಂತಗಳ ಸಾಲು ನಿತ್ಯವೂ ಹೆಚ್ಚಾಗುತ್ತಲೇ ಇದೆ. ಯಾರು ಪ್ರತಿಪಾದಿಸಿದರೂ ಸಮಾಜವಾದ ಬೆಳೆಯಲಿಲ್ಲ. ಕಾರ್ಲ್‌ಮಾರ್ಕ್ಸ್‌ನ ಸಮಾಜವಾದವು ಒಂದು ತತ್ವವಾಗಿ ನಿಂತಿವೆ. ಬಸವಣ್ಣನ ಜಾತಿನಾಶ, ಲಿಂಗ ಸಮಾನತೆ, ವೃತ್ತಿ ಸಮಾನತೆ, ಕಾಯಕ, ದಾಸೋಹ ತತ್ವಗಳು ವಚನಗಳಲ್ಲಿ ಅಡಗಿವೆ. ಮನುಷ್ಯ ತಾನು ಬದುಕುತ್ತಿರುವ ಸಮಾಜದಲ್ಲಿ ಒಳಗೆ ಬಿಟ್ಟುಕೊಳ್ಳಲಿಲ್ಲ.

ಇಂದು ಖಾಸಗಿ ಬಂಡವಾಳ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಬೆಳೆಯುತ್ತಲೇ ಇದೆ. ತಾರತಮ್ಯವೇ ಸಮಾಜದ ಮುಖ್ಯ ನೀತಿಯಾಗಿ ಪರಿಣಮಿಸಿದೆ. ಆಳುವ ಪ್ರಭುತ್ವಗಳಿಗೆ ಸರ್ಕಾರ ಒಡೆತನದ ಇಲಾಖೆಗಳು ತಲೆನೋವಾಗಿ ನಿಂತಿವೆ. ಸಾರ್ವಜನಿಕ ಹಿತಾಸಕ್ತಿಯನ್ನು ಕಾಯುವ ಇಲಾಖೆಗಳನ್ನು ಸರ್ಕಾರಗಳೇ ಕಡೆಗಣಿಸುತ್ತವೆ. ಬಲಪಡಿಸುವ ರಾಜಕೀಯ ಇಚ್ಛಾಶಕ್ತಿ ಸರ್ಕಾರಕ್ಕಿಲ್ಲ. ಹೀಗಿರುವಾಗ ಸಮಾಜವಾದಕ್ಕೆ ಸ್ಥಾನವೆಲ್ಲಿದೆ?

**ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನ್ನು**
**ಕೋಳಿ ಒಂದು ಕುಟಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ?**
**ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಯಿಂದ ಕರಕಷ್ಟ**
**ಕೂಡಲಸಂಗಮದೇವಾ? (ಬಸವಣ್ಣ)**

ಸಮಾಜವಾದದ ಎಂದರೆ ಏನೆಂದು ಮೇಲಿನ ವಚನ ತಿಳಿ ಹೇಳುತ್ತದೆ. ಹಾಗೆಯೇ ಇಲ್ಲವಾದ ಕಾರಣ ನೊಂದುಕೊಂಡು ಹೇಳುತ್ತದೆ. ಸಮಾಜದ ಮನುಷ್ಯರು ಶಿವಭಕ್ತರಾಗಿಲ್ಲ. ಭಕ್ತಿ ಪಕ್ಷದವರಂತೂ ಆಗಿಲ್ಲ. ಇದರಿಂದ ಮನುಷ್ಯ, ಕಾಗೆ, ಕೋಳಿಗಳಿಗಿಂತ ಕನಿಷ್ಠ ಸ್ಥಾನದಲ್ಲಿ ನಿಂತಿದ್ದಾನೆ.


**'ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ'**
**ಇಂದಿಂಗೆ ನಾಳಿಂಗೆ ಬೇಕೆಂದೆನಾದೊಡೆ**
**ನಿಮ್ಮಾಣೆ, ನಿಮ್ಮ ಪ್ರಮಥರಾಣೆ (ಬಸವಣ್ಣ)**

ಸಮಾಜದ ವ್ಯಕ್ತಿಯಾಗಿ ಬಸವಣ್ಣ ತನ್ನ ನಿಲುವನ್ನು ಸಾರಿ ನುಡಿದಿದ್ದಾನೆ ಮತ್ತು ನಡೆದಿದ್ದಾನೆ. ಇದಕ್ಕೆ ಸಾಕ್ಷಿಯಾಗಿ ಆತನ ಮಾತು ಈ ರೀತಿಯಿದೆ. 'ನುಡಿದಂತೆ ನಡೆಯುವೆ, ನಡೆಯೊಳಗೆ ನುಡಿಯ ಪೂರೈಸುವೆ, ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ, ಒಂದು ಜವೆ ಕೊರತೆಯಾದಡೆ ಎನ್ನನದ್ದಿ ನೀಸಿದ್ದು ಹೋಗ'. ಈ ಬಗೆಯ ನಿಷ್ಠುರತೆ, ಛಲ ಬಸವಣ್ಣನಲ್ಲಿ ಮಾತ್ರ ಕಾಣಲು ಸಾಧ್ಯ. ಅದರಿಂದಲೇ ಬಸವಣ್ಣ ಸಮಾಜವಾದಿಯಾಗಿ ಬಾಳಿದ.

**ಆನೆಯನೇರಿಕೊಂಡು ಹೋದಿರೇ ನೀವು,**
**ಕುದುರೆಯನೇರಿಕೊಂಡು ಹೋದಿರೇ ನೀವು,**
**ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೇ ಅಣ್ಣಾ !**
**ಸತ್ಯದ ನಿಲವನರಿಯದೆ ಹೋದಿರಲ್ಲಾ,**
**ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ**
**ಅಹಂಕಾರವೆಂಬ ಸದಮದಗಜವೇರಿ**
**ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ ?**
**ನಮ್ಮ ಕೂಡಲಸಂಗಮದೇವನರನರಿಯದೆ**
**ನರಕಕ್ಕೆ ಭಾಜನವಾದಿರಲ್ಲಾ ?**

ಸಮಾಜವಾದಿ ಬಸವಣ್ಣನ ಈ ಮಾತುಗಳು ಹತ್ತಿರ ಹತ್ತಿರ ಒಂಭತ್ತು ನೂರು ವರ್ಷಗಳಿಂದ ನಮ್ಮ ಸಮಾಜ ಕೇಳುತ್ತಲೇ ಇದೆ. ಮನುಷ್ಯರ ಹಾದಿ ವಿರುದ್ಧವಾಗಿಯೇ ಇದೆ, ಅಲ್ಲವೆ?

## ತುಂಗಭದ್ರಾ ನೀರಿನ ಮಟ್ಟ



| ಶುಕ್ರವಾರ: 16–02–2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.86 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 142 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.335 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1610.85 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8252 ಕ್ಯುಸೆಕ್ |
| ಸಾಮರ್ಥ್ಯ | 39.271 ಟಿಎಂಸಿ |

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಮಕ್ಕಳ ಕಾಯ್ದೆಗಳು ಸಮಗ್ರ ಅನುಷ್ಠಾನವಾಗಬೇಕು

### ಮಕ್ಕಳ ಹಕ್ಕುಗಳ ರಕ್ಷಣಾ ಸದಸ್ಯರಾದ ಶಶಿಧರ ಕೋಸಂಬೆ ಹೇಳಿಕೆ | ಮಕ್ಕಳ ಮೇಲಿನ ದೌರ್ಜನ್ಯ, ಬಾಲ್ಯ ವಿವಾಹ, ತಡೆಗೂ ಕಾಯ್ದೆ–ಕಾನೂನುಗಳಿವೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಮಕ್ಕಳ ಮೇಲಿನ ದೌರ್ಜನ್ಯ, ಬಾಲ್ಯ ವಿವಾಹ, ಬಾಲಕಾರ್ಮಿಕ ಪದ್ಧತಿ ಪ್ರಕರಣಗಳು ಹೆಚ್ಚುತ್ತಿದ್ದು, ಅದರಂತೆ ಅವುಗಳ ತಡೆಗೂ ಕಾಯ್ದೆ–ಕಾನೂನುಗಳಿವೆ. ಅಧಿಕಾರಿಗಳು ಮಕ್ಕಳ ಹಕ್ಕುಗಳು ಹಾಗೂ ಕಾಯ್ದೆಗಳನ್ನು ತಿಳಿದುಕೊಂಡು ಸಂಪೂರ್ಣವಾಗಿ ಅನುಷ್ಠಾನಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ ಅವರು ಹೇಳಿದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಮಕ್ಕಳ ಹಕ್ಕುಗಳು ಮತ್ತು ವಿವಿಧ ಕಾಯ್ದೆಗಳ ಕುರಿತು ಭಾಗೀದಾರ ಇಲಾಖೆಗಳ ಜಿಲ್ಲಾ, ತಾಲ್ಲೂಕು, ಗ್ರಾಮ ಮಟ್ಟದ ಅಧಿಕಾರಿಗಳಿಗೆ ಶುಕ್ರವಾರದಂದು ಜಿಪಂನ ನಜೀರ್ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಎರಡು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ಹಕ್ಕುಗಳ ರಕ್ಷಣೆ, ಬಾಲ ನ್ಯಾಯ ಕಾಯ್ದೆಯ ಮೂಲ ಉದ್ದೇಶವಾಗಿದೆ. ಎಲ್ಲರೂ ತಮ್ಮ ಕಾರ್ಯವ್ಯಾಪ್ತಿ ಅರಿತುಕೊಂಡು ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿದಾಗ ಕಾಯ್ದೆಗಳ ಅನುಷ್ಠಾನ ಸಾಧ್ಯ ಎಂದರು.



ಮಕ್ಕಳ ಹಕ್ಕುಗಳ ರಕ್ಷಣೆ, ಬಾಲ ನ್ಯಾಯ ಕಾಯ್ದೆ ಸೇರಿದಂತೆ ಮಕ್ಕಳಿಗೆ ಸಂಬಂಧಿಸಿದ ಕಾಯ್ದೆಗಳ ಅನುಷ್ಠಾನಕ್ಕೆ ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ ಸೇರಿದಂತೆ ಸಂಬಂಧಪಟ್ಟ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಕಾಯ್ದೆಗಳ ಅನುಷ್ಠಾನಕ್ಕೆ ಎಲ್ಲ ಇಲಾಖೆಗಳ ಸಹಕಾರ ಬಹಳ ಅಗತ್ಯ ಎಂದು ತಿಳಿಸಿದರು.

ಮಕ್ಕಳ ಮೇಲಿನ ದೌರ್ಜನ್ಯ, ಬಾಲ್ಯ ವಿವಾಹ ಪದ್ಧತಿ, ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಯೂ ಪ್ರತಿಯೊಬ್ಬ ಅಧಿಕಾರಿಗಳ ಜವಾಬ್ದಾರಿಯಾಗಬೇಕು. ಇಂಥ ಕೃತ್ಯಗಳ ನಿಯಂತ್ರಣಕ್ಕೆ ವಿವಿಧ ಇಲಾಖೆಗಳ ಸಹಕಾರವೂ ಅಗತ್ಯವಾಗಿದೆ. ಇವುಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಇಂಥ ಕಾರ್ಯಾಗಾರ ಅವಶ್ಯಕ ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಪ್ರಾಪ್ತೆಯರು ಗರ್ಭಿಣಿಯಾಗುತ್ತಿರುವುದು ವಿಷಾಧಕರ ಸಂಗತಿಯಾಗಿದೆ. ಬಾಲ ನ್ಯಾಯ ಕಾಯ್ದೆ ಹಾಗೂ ಬಾಲ್ಯವಿವಾಹ ನಿಷೇಧ ಕಾಯ್ದೆ ಬಗ್ಗೆ ಸಂಬಂಧಪಟ್ಟ ಇಲಾಖೆಗಳು ಅರಿವು ಮೂಡಿಸಬೇಕು ಎಂದು ಹೇಳಿದರು.

ಮಕ್ಕಳ ಹಕ್ಕುಗಳ ರಕ್ಷಣೆ, ಅವರ ಸರ್ವಾಂಗೀಣ ಅಭಿವೃದ್ಧಿಗೆ ನಮ್ಮ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಸದಾ ಬದ್ಧವಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ ಅವರು ಮಾತನಾಡಿ, ದೇಶದ ಅಭಿವೃದ್ಧಿಯಲ್ಲಿ ಮಕ್ಕಳಿಗೆ ಗುಣಮಟ್ಟ ಶಿಕ್ಷಣ, ಸಧೃಡ ಆರೋಗ್ಯ, ಸಮಾಜದಲ್ಲಿ ಉತ್ತಮ ಅವಕಾಶಗಳನ್ನು ಕಲ್ಪಿಸುವುದು ಆದ್ಯ ಕರ್ತವ್ಯವಾಗಿದೆ.

ಮಕ್ಕಳ ಹಕ್ಕುಗಳು ಮತ್ತು ಅವುಗಳಿಗೆ ಚ್ಯುತಿ ಉಂಟಾದಾಗ ಬರುವ ಕಾಯ್ದೆಗಳ ಬಗ್ಗೆ ತಿಳಿದುಕೊಂಡಾಗ ಮಾತ್ರ ಅಧಿಕಾರಿಗಳು ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ಅಭಿಮತ ವ್ಯಕ್ತಪಡಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್.ಕೆ.ಹೆಚ್ ಅವರು ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಂತರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಕೊಪ್ಪಳ ಯೂನಿಸೇಫ್ ಮಕ್ಕಳ ಸಂರಕ್ಷಣಾ ಯೋಜನೆಯ ಪ್ರಾದೇಶಿಕ ಸಂಯೋಜಕರಾದ ಡಾ.ಕೆ.ರಾಘವೇಂದ್ರ ಭಟ್ ಅವರು, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ ಕಾಯ್ದೆ–2015), ಪೋಕ್ಸೊ ಕಾಯ್ದೆ–2012, ಬಾಲ್ಯವಿವಾಹ ನಿಷೇಧ ಕಾಯ್ದೆ–2006, ಆರ್.ಟಿ.ಐ ಕಾಯ್ದೆ–2009ರ ಕಾಯ್ದೆಗಳ ಕುರಿತು ಕಾರ್ಯಾಗಾರದಲ್ಲಿ ವಿಶ್ಲೇಷಿಸಿದರು.

ಈ ಸಂದರ್ಭದಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ವಿಜಯಲಕ್ಷ್ಮೀ ಮೈದೂರು, ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಾಣಾಧಿಕಾರಿ ಹಾಗೂ ಪ್ರಭಾರಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಾಮಕೃಷ್ಣ ನಾಯಕ.ಎಂ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಕ್ರೋ ನ್ಯೂಸ್

## ಸಾಂಸ್ಕೃತಿಕ ನಾಯಕರಾದ ಶ್ರೀ ಬಸವೇಶ್ವರರ ಭಾವಚಿತ್ರ ಅನಾವರಣ ಕಾರ್ಯಕ್ರಮ ಮಾದರಿಯಾಗಿ ನಡೆಯಲಿ



**ಹಂಪಿ ಟೈಮ್ಸ್ ಹೊಸಪೇಟೆ**

ಸಾಂಸ್ಕೃತಿಕ ನಾಯಕರಾದ, ಜಗಜ್ಯೋತಿ ಶ್ರೀ ಬಸವೇಶ್ವರರ ಭಾವಚಿತ್ರ ಅನಾವರಣ ಕಾರ್ಯಕ್ರಮವನ್ನು ವಿಜಯನಗರ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾಡಳಿತದಿಂದ ಅರ್ಥಪೂರ್ಣವಾಗಿ ಆಚರಣೆ ಮಾಡಲು ಅಗತ್ಯ ಏರ್ಪಾಡು ಮಾಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ಧಲಿಂಗಣ್ಣ ರಂಗಣ್ಣವರ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಫೆ.16ರಂದು ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ರಾಜ್ಯ ಸರ್ಕಾರದ ಮಾರ್ಗಸೂಚಿಯನುಸಾರ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಏರ್ಪಾಡು ಮಾಡಲು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಜಿಲ್ಲಾಡಳಿತ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಚನ ಗಾಯನ ಸೇರಿದಂತೆ ನಾನಾ ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣ ಆಚರಣೆ ಮಾಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಮುಖಂಡರಾದ ಜಿ.ತಮ್ಮನಾಳಪ್ಪ, ನಿಮಗಲ್ ರಾಮಕೃಷ್ಣ, ವಿನಾಯಕ ಶೆಟ್ಟರ್, ಮಾವಿನಹಳ್ಳಿ ಬಸವರಾಜ, ಶರಣಸ್ವಾಮಿ, ಇಟಗಿ ಸಂಗಪ್ಪ, ಈಶ್ವರಪ್ಪ ಎಂಜಿನಿಯರ್, ಸಂಗಪ್ಪ ಧರ್ಮಸಾಗರ, ಗುಜ್ಜಲ ಗಣೇಶ ಸೇರಿದಂತೆ ಇತರರು ಮಾತನಾಡಿ, ಶ್ರೀ ಬಸವೇಶ್ವರರ ಭಾವಚಿತ್ರ ಅನಾವರಣ ಕಾರ್ಯಕ್ರಮವನ್ನು ಕಪ್ಪು ಚುಕ್ಕೆ ಬಾರದ ಹಾಗೆ ನಡೆಸಬೇಕು. ವಿಜಯನಗರ ಜಿಲ್ಲೆಯ ಕಾರ್ಯಕ್ರಮವು ಇತರರಿಗೆ ಮಾದರಿಯಾಗುವ ಹಾಗೆ ನಡೆಯಬೇಕು. ಈ ಕಾರ್ಯಕ್ರಮ ಹಿನ್ನೆಲೆಯಲ್ಲಿ ಪ್ರೌಢಶಾಲೆ ಮತ್ತ ಕಾಲೇಜು ಹಂತದ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಬೇಕು. ವಚನ ಸಂಪುಟಗಳು ಹಾಗೂ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಂಪುಟಗಳನ್ನು ಪ್ರತಿಯೊಂದು ಗ್ರಂಥಾಲಯಗಳಲ್ಲಿ ಇಟ್ಟು ಓದಲು ಅವಕಾಶ ಮಾಡಿಕೊಡಬೇಕು ಎಂದು ಸಲಹೆ ಮಾಡಿದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ ಅವರು ಮಾತನಾಡಿ, ಸಂಘ ಸಂಸ್ಥೆಗಳು ನೀಡಿದ ಸಲಹೆಯಂತೆ ಜಗಜ್ಯೋತಿ ಬಸವೇಶ್ವರ ಭಾವಚಿತ್ರ ಅನಾವರಣ ಕಾರ್ಯಕ್ರಮವನ್ನು ಶಿಸ್ತು ಬದ್ಧವಾಗಿ ಆಯೋಜನೆ ಮಾಡಲಾಗುವುದು ಎಂದು ತಿಳಿಸಿದರು.

ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಮಾತನಾಡಿ, ಜಗಜ್ಯೋತಿ ಬಸವೇಶ್ವರರು 12ನೇ ಶತಮಾನದಲ್ಲಿ ಸಾಮಾಜಿಕ ಕ್ರಾಂತಿ ಮಾಡಿದ ಹರಿಕಾರರಾಗಿದ್ದಾರೆ. ಸಮಸಮಾಜ ನಿರ್ಮಾಣದ ಕನಸನ್ನು ಬಿತ್ತಿದ ಮಹಾತ್ಮರಾಗಿದ್ದಾರೆ. ಅಂತಹ ಮಹನಿಯರ ಭಾವಚಿತ್ರ ಅನಾವರಣ ಕಾರ್ಯಕ್ರಮದಲ್ಲಿ ಭಾಗಿಯಾಗುವುದು ಎಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಬಸವ ಬಳಗದ ಮುಖಂಡರು ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪ್ರಮುಖರು, ರೈತ ನಾಯಕರು ಸೇರಿದಂತೆ ಇನ್ನಿತರ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಇದ್ದರು.

# ಬಡವರ ಕೊಳ್ಳುವ ಶಕ್ತಿ ಹೆಚ್ಚಳಕ್ಕೆ ಗುರಿ : ಸಿಎಂ ಸಿದ್ದರಾಮಯ್ಯ

## ಆಯವ್ಯಯ ಮಂಡಿಸಿದ ನಂತರ ವಿಧಾನಸೌಧದ ಸಭಾಂಗಣದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಹೇಳಿಕೆ

**ಹಂಪಿ ಟೈಮ್ಸ್ ಬೆಂಗಳೂರು**

ರಾಜ್ಯದ ಬಡವರು, ಮಹಿಳೆಯರು, ಯುವಕರು, ಪರಿಶಿಷ್ಟ ಜಾತಿ, ವರ್ಗದವರು, ಅಲ್ಪಸಂಖ್ಯಾತರಿಗೆ ಕೊಂಡುಕೊಳ್ಳುವ ಶಕ್ತಿ ಹೆಚ್ಚು ಮಾಡುವ ಪ್ರಯತ್ನ ಹಾಗೂ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಒತ್ತು ನೀಡುವ ಪ್ರಯತ್ನವೂ ಬಜೆಟ್ ನಲ್ಲಿ ಆಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಶುಕ್ರವಾರ 2024–25 ನೇ ಸಾಲಿನ ಆಯವ್ಯಯವನ್ನು ಮಂಡಿಸಿದ ನಂತರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು.

ದೇಶದಲ್ಲಿ ನಿರುದ್ಯೋಗ, ಹಣದುಬ್ಬರುದ ಸಮಸ್ಯೆಗಳಿಂದ ಬಡವರು ಜೀವನ ಸಾಗಿಸುವುದು ಕಷ್ಟವಾಗಿದೆ. ಬಡವರ ಕೊಳ್ಳುವ ಶಕ್ತಿಯನ್ನು ಹೆಚ್ಚು ಮಾಡಲು ಗ್ಯಾರಂಟಿ ಯೋಜನೆಗಳನ್ನು ರೂಪಿಸಲಾಗಿದೆ. ಈ ಆರ್ಥಿಕ ವರ್ಷದಲ್ಲಿ ನಾವು ಅಧಿಕಾರಕ್ಕೆ ಬಂದು 9 ತಿಂಗಳಾಗುವ ಮೊದಲೇ ನಾವು ಜನತೆಗೆ ಕೊಟ್ಟಿದ್ದ ಭರವಸೆಗಳನ್ನು ಈಡೇರಿಸಲಾಗಿದೆ. ಇದರೊಂದಿಗೆ ಕೃಷಿ, ನೀರಾವರಿ, ಲೋಕೋಪಯೋಗಿ, ಇಂಧನ, ಗ್ರಾಮೀಣಾಭಿವೃದ್ಧಿ, ಬರಗಾಲ ಎಲ್ಲವನ್ನೂ ಸಮರ್ಥವಾಗಿ ನಿಭಾಯಿಸುವ ದೃಷ್ಟಿಯಿಂದ ಹಾಗೂ ಅಭಿವೃದ್ಧಿಗೆ ಹಣ ಕೊಡುವ ಕೆಲಸವನ್ನೂ ಮಾಡಲಾಗಿದೆ ಎಂದು ಅಭಿಪ್ರಾಯಪಟ್ಟರು.

ಅಭಿವೃದ್ಧಿಗೂ ಅನುದಾನ 2024–25 ನೇ ಸಾಲಿಗೆ 3,71,383 ಕೋಟಿ ರೂ. ಗಾತ್ರದ ಬಜೆಟ್ ಮಂಡಿಸಲಾಗಿದೆ. ಕಳೆದ ವರ್ಷ ಬಜೆಟ್ ಗಾತ್ರ 3,27,747 ಕೋಟಿ ರೂ. ಇತ್ತು. ಕಳೆದ ಬಜೆಟ್ ಗಿಂತ 46,636 ಕೋಟಿ ರೂ. ಹೆಚ್ಚಾಗಿದೆ. ಜುಲೈನಲ್ಲಿ ಮಂಡಿಸಿದ ಬಜೆಟ್ ಗಾತ್ರಕ್ಕಿಂತ ಬೆಳವಣಿಗೆಯಲ್ಲಿ ಶೇ. 13 ರಷ್ಟು ಬೆಳವಣಿಗೆಯಾಗಿದೆ. ಆರ್ಥಿಕವಾಗಿ ದಿವಾಳಿಯಾಗಿದೆ , ಗ್ಯಾರಂಟಿ ಜಾರಿಯಿಂದಾಗಿ ಮತ್ತು ಮಹಿಳೆಯರು , ಬಡವರಿಗೆ ಅವಮಾನವಾಗುವ ರೀತಿಯಲ್ಲಿ 'ಬಿಟ್ಟಿ ಗ್ಯಾರಂಟಿ' ಎಂಬ ಟೀಕೆ ಬಂದಿದೆ. ಈ ವರ್ಷ 36,000 ಕೋಟಿ ರೂ. ಗ್ಯಾರಂಟಿಗಳಿಗೆ ಕೊಟ್ಟಿದ್ದರೂ ಕೂಡ ಅಭಿವೃದ್ಧಿಗೂ ಅನುದಾನವನ್ನು ಮೀಸಲಿರಿಸಿದ್ದೇವೆ. ಬರಗಾಲ ನಡುವೆಯೂ 240 ತಾಲ್ಲೂಕುಗಳಲ್ಲಿ 223 ತಾಲ್ಲೂಕುಗಳು ಬರಪೀಡಿತವಾಗಿದ್ದು , ಸುಮಾರು 35,000 ಕೋಟಿ ರೂ. ಆಹಾರದ ಉತ್ಪಾದನೆಯಲ್ಲಿ ನಷ್ಟವಾಗಿದೆ. 18171 ಕೋಟಿ ರೂ.ಗಳನ್ನು ಎನ್ ಡಿ ಆರ್ ಎಫ್ ಮಾರ್ಗಸೂಚಿಗಳ ಪ್ರಕಾರ ಬರಪರಿಹಾರವನ್ನು ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಎನ್.ಡಿ.ಆರ್ ಎಫ್ ಅನುದಾನ ನಿಗದಿ ಮಾಡುವುದು ಹಣಕಾಸು ಆಯೋಗದವರು. ಅದು ರಾಜ್ಯದಿಂದ ಸಂಗ್ರಹಿಸಿರುವ ಹಣ. ಕೇಂದ್ರ ಸರ್ಕಾರದ ಅನುದಾನವಲ್ಲ. ಐದು ತಿಂಗಳಾದರೂ ಒಂದು ರೂಪಾಯಿಯನ್ನೂ ಬಿಡುಗಡೆ ಮಾಡಿಲ್ಲ, ಸಭೆಯನ್ನೂ ಕರೆದಿಲ್ಲ ಎಂದು ವಿವರಿಸಿದರು.

ಬಿಜೆಪಿಗೆ ಸಂಸದೀಯ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲ ಬಿಜೆಪಿಯವರು ಬಾಯಿಗೆ ಬಂದಂತೆ ಮಾತನಾಡುತ್ತಾರೆ. ವಿಧಾನಸಭೆಯಲ್ಲಿ ಬಜೆಟ್ ಮಂಡಿಸುವಾಗ ವಾಕ್ ಔಟ್ ಮಾಡಿದ ನಿದರ್ಶನ ಇಲ್ಲ. ಬಜೆಟ್ ಓದಲು ಪ್ರಾರಂಭ ಮಾಡಿದ ಕೂಡಲೇ ಸುನೀಲ್ ಕುಮಾರ್ ಅವರು ಏನಿಲ್ಲ ಏನಿಲ್ಲ ಎಂದು ಘೋಷಣೆ ಕೂಗುತ್ತಿದ್ದರು. ಬಿಜೆಪಿಗೆ ಸಂಸದೀಯ, ಪ್ರಜಾಪ್ರಭುತ್ವ ಹಾಗೂ ಸಂವಿಧಾನಾತ್ಮಕ ವ್ಯವಸ್ಥೆಯಲ್ಲಿ ನಂಬಿಕೆ ಇಲ.?ಲ ಅವರ ತಲೆ ತುಂಬ ರಾಜಕೀಯ ಮಂಜು ತುಂಬಿದೆ. ಕಾಮಾಲೆ ರೋಗಿಗಳಿಗೆ ಕಂಡಿದ್ದೆಲ್ಲಾ ಹಳದಿಯಂತೆ ಆಗಿದೆ. ರಾಜಕೀಯ ಹೇಳಿಕೆ ಬೇಡ ಎನ್ನುವುದಿಲ್ಲ. ಆದರೆ ಟೀಕೆಗಳು ಆರೋಗ್ಯಕರವಾಗಿರಬೇಕು. ಪ್ರತೀಕೆ ಮಾಡುವ ಸಲುವಾಗಿಯೇ ಟೀಕೆ ಮಾಡುತ್ತಾರೆ. ಪ್ಲಕಾರ್ಡ್ ಹಿಡಿದಿದ್ದರು. ಬಜೆಟ್ ಕೇಳಬಾರದು ಎಂದು ಯೋಚಿಸಿಕೊಂಡೇ ಬಂದಿದ್ದರು. ನಾನು ವಸ್ತುಸ್ಥಿತಿಯನ್ನು ಹೇಳಿದರೆ ಅವರಿಗೆ ಅದು ನುಂಗಲಾರದ ತುತ್ತು. ಸತ್ಯ ಹೇಳಿದರೆ ತಡೆದುಕೊಳ್ಳಲು ಆಗುವುದಿಲ್ಲ ಎಂದರು. ಕನ್ನಡಿಗರಿಗೆ ಅನ್ಯಾಯವಾದರೂ ಸುಮ್ಮನಿರಬೇಕೇ?

ಕೇಂದ್ರದಿಂದ ರಾಜ್ಯಕ್ಕಾದ ಅನ್ಯಾಯವನ್ನು ಜನರಿಗೆ ಹೇಳುವುದು ನನ್ನ ಕರ್ತವ್ಯ ಹಾಗೂ ಜವಾಬ್ದಾರಿ. ಅವರು ಕೂಡ ಕೋಲೆಬಸವನ ಹಾಗೆ ತಲೆ ಅಲ್ಲಾಡಿಸದೇ ಕೇಂದ್ರದವರನ್ನು ಕೇಳಬೇಕಿತ್ತು. ಕೋಲಾರ ಸಂಸದ ಮುನಿಸ್ವಾಮಿಯವರು ಅವರು ಸಂಸತ್ತಿನಲ್ಲಿ ಒಂದು ದಿನವೂ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಬಾಯಿಬಿಡಲಿಲ್ಲ. ಐದು ವರ್ಷದಲ್ಲಿ ಒಂದು ಬಾರಿಯಾದರೂ ಮಾತನಾಡಿದ್ದಾರಾ? ಅವರು ಸಂಸದರಾಗಲು ಲಾಯಕ್ಕೇ ಎಂದರು. ಕೇಂದ್ರ ಸರ್ಕಾರದಿಂದ ನ್ಯಾಯಯುತವಾದದ್ದು ಕೇಳಲು ಇವರಿಗೆ ಸಾಧ್ಯವಿಲ್ಲ ಎಂದರೇ ಏನು ಸೂಚಿಸುತ್ತದೆ. ನಾನು ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಸಿಎಂ ಆಗಿದ್ದಾಗ , ಕೇಂದ್ರದ ಅನುದಾನವನ್ನು ಪಡೆಯಿರಿ ಎಂದು ಒತ್ತಾಯಿಸಿದ್ದೆ. 15 ನೇ ಹಣಕಾಸು ಆಯೋಗದವರು ವಿಶೇಷ ಅನುದಾನ 5495 ಕೋಟಿ ರೂ ವಿಶೇಷ ಅನುದಾನ ಪಡೆಯಲು ಹೇಳಿದ್ದೆ. ಬೆಂಗಳೂರು ಅಭಿವೃದ್ಧಿಗೆ 6000 ಕೋಟಿ ಕೊಟ್ಟಿದ್ದಾರೆ. ಅದನ್ನು ಪಡೆಯಿರಿ ಎಂದು ಹೇಳಿದ್ದೆ. ಒಟ್ಟು 11495 ಕೋಟಿ ರೂ. ಶಿಫಾರಸ್ಸು ಮಾಡಿರುವುದನ್ನು ಒತ್ತಾಯ ಮಾಡಿ ಎಂದು ಅವರಿಗೆ ಒತ್ತಾಯಿಸಿದ್ದೆ. ಕನ್ನಡಿಗರಿಗೆ ಅನ್ಯಾಯವಾದರೂ ಸುಮ್ಮನಿರಬೇಕೇ? ಭದ್ರಾ ಮೇಲ್ದಂಡೆಗೆ 2023–24 ಕೇಂದ್ರ ಬಜೆಟ್ ನಲ್ಲಿ 5300 ಕೋಟಿ ಕೊಡುತ್ತೇವೆ ಎಂದಿದ್ದರು. ಅದನ್ನೇ ಇಲ್ಲಿನ ಬಜೆಟ್ ನಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿ ನರೇಂದ್ರ ಮೋದಿಗೆ ಧನ್ಯವಾದಗಳನ್ನು ಅರ್ಪಿಸಿದ್ದರು. ರಾಷ್ಟ್ರೀಯ ಯೋಜನೆಯಾಗಲಿದೆ ಎಂದು ಹೇಳಿದವರು ಇವರೇ ಆದರೆ ಇನ್ನೂ ಆಗಿಲ್ಲವೆಂದರೆ ಅವರಿಗೆ ಕೋಪ ಏಕೆ? ಇದು ಕನ್ನಡ ಜನರಿಗೆ ಮಾಡುತ್ತಿರುವ ದ್ರೋಹ. ಇದು ಪ್ರಜಾಪ್ರಭುತ್ವದ ವಿರೋಧವಲ್ಲವೇ ? ಎಂದು ಪ್ರಶ್ನಿಸಿದರು.

ರಾಜಕೀಯ ಮಂಜು ಕವಿದಿದೆ ಕೇಂದ್ರ ಹಣಕಾಸು ಸಚಿವೆ ಹಾಗೂ ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬಜೆಟ್ ಬಾಷಣದ ಭಾಗವನ್ನು ಓದಿ ಹೇಳಿದ ಮುಖ್ಯಮಂತ್ರಿಗಳು, ಪ್ಲಕಾರ್ಡ್ ಹಿಡಿದು ಬಂದರೆ ಕರ್ನಾಟಕದ ಜನರಿಗೆ ಮಾಡುವ ದ್ರೋಹ ಎಂದರು. ಇದು ಪ್ರಜಾಪ್ರಭುತ್ವ ವಿರೋಧಿ ಅಲ್ಲವೇ ? ನಾನು ಈ ವರ್ಷ ಗ್ಯಾರಂಟಿಗಳಿಗೆ 36000 ಕೋಟಿ ಕೊಟ್ಟಿಲ್ಲ ಎಂದು ಸಾಬೀತು ಪಡಿಸಲಿ. ಅಭಿವೃದ್ಧಿ ಕೆಲಸಗಳಿಗೆ ಅನುದಾನ ನೀಡಿಲ್ಲ ಎಂದು ಸಾಬೀತು ಮಾಡಲಿ. ಚರ್ಚೆ ಮಾಡಬಹುದಿತ್ತು. ಅದಕ್ಕೆ ಇವರ ತಲೆಯಲ್ಲಿ ಏನೂ ಇಲ್ಲ, ರಾಜಕೀಯ ಮಂಜು ಕವಿದಿದೆ. ಕನ್ನಡಿಗರ ಜನದ್ರೋಹದ ಕೆಲಸ ಮಾಡಿದ್ದಾರೆ ಎಂದರು. ಸಾಲ ಮಾಡಿರುವುದಾಗಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳುತ್ತಾರೆ. ನಾನು ಸ್ವಾತಂತ್ರ್ಯ ಬಂದಾಗಿನಿಂದ ಹಣಕಾಸಿನ ಮಂತ್ರಿಯಾಗಿರುವವರೆಗೆ ಈ ರಾಜ್ಯದ ಮೇಲೆ 2,46,000 ಕೋಟಿ ಸಾಲವಿದ್ದು , ನಾನು ಮಾಡಿರುವದು 1.12 ಲಕ್ಷ ಕೋಟಿ ರೂ.ಗಳು ಮಾತ್ರ. ಇವರ ಬಜೆಟ್ ನಲ್ಲಿ ಕೇಲದ ವರ್ಷ 80 ಸಾವಿರ ಕೋಟಿ ರೂ.ಗಳ ಸಾಲ ಮಾಡಿದ್ದಾರೆ ಎಂದರು.



### ಮುಖ್ಯಾಂಶಗಳು

**ಕೃಷಿ, ನೀರಾವರಿ, ಇಂಧನ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸಮಾಜ ಕಲ್ಯಾಣ ಇಲಾಖೆ, ನಗರಾಭಿವೃದ್ಧಿ ಸೇರಿ ಎಲ್ಲಾ ವಲಯ, ಇಲಾಖೆ, ಕ್ಷೇತ್ರಗಳಿಗೆ ಹಣ ಒದಗಿಸಿದ್ದೇವೆ**

**2024–25 ನೇ ವರ್ಷಕ್ಕೆ 371383 ಕೋಟಿ ಗಾತ್ರದ ಬಜೆಟ್ ಮಂಡಿಸಿದ್ದೇವೆ**

**ಆರ್ಥಿಕವಾಗಿ ದಿವಾಳಿಯಾಗಿದೆ ಎನ್ನುವ ಬಿಜೆಪಿ ಆರೋಪ ಸಂಪೂರ್ಣ ಸುಳ್ಳಾಗಿಸುವ ಆರ್ಥಿಕ ಬೆಳವಣಿಗೆ ಸಾಧಿಸಿ, ಎಲ್ಲಾ ವಲಯಗಳ ಅಭಿವೃದ್ಧಿಗೆ ಹಣ ಒದಗಿಸಿದ್ದೇವೆ**

**ಬಜೆಟ್ ಓದಲು ಶುರುವಾಗುವ ಮೊದಲೇ ಬಿಜೆಪಿ ಏನಿಲ್ಲಾ ಏನಿಲ್ಲಾ ಅಂತ ರಾಗ ಎಳೆದು, BJP ಯವರ ತಲೆಯಲ್ಲಿ ಏನೂ ಇಲ್ಲ ಎಂದು ತೋರಿಸಿದ್ದಾರೆ**

**ರಾಜ್ಯದ ಮುಖ್ಯಮಂತ್ರಿಯಾಗಿ ರಾಜ್ಯಕ್ಕೆ ಕೇಂದ್ರದಿಂದ ಆಗಿರುವ ಅನ್ಯಾಯವನ್ನು ರಾಜ್ಯದ ಜನರ ಮುಂದೆ ಇಡಬೇಕಾದ್ದು ನನ್ನ ಕರ್ತವ್ಯ ಮತ್ತು ಜವಾಬ್ದಾರಿ**

**ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಬೊಮ್ಮಾಯಿ ಅವರು ಅವರ ಬಜೆಟ್ ನಲ್ಲಿ ಹೇಳಿರುವ ಅಧಿಕೃತ ಮಾತು ಬಜೆಟ್ ಪುಸ್ತಕ ಮತ್ತು ದಾಖಲೆಗಳಲ್ಲಿದೆ. ಇದನ್ನು ಹೇಳಿದ್ದಕ್ಕೆ ಅವರು ಬಾಯ್ಕಾಟ್ ಮಾಡಿ ಹೋಗಿದ್ದಾರೆ**

**ರಾಜ್ಯದ ಬಡವರಿಗೆ ಕೊಳ್ಳುವ ಶಕ್ತಿ ಹೆಚ್ಚಳ; ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಒತ್ತು**

**ಬಿಜೆಪಿಗೆ ಸಂಸದೀಯ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲ ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ ಬಿಜೆಪಿ ಕೋಪ ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ**

## ಟ್ವೀಟ್ X ಟ್ವೀಟ್



ನಮ್ಮ ಸರ್ಕಾರದ 2024–25ನೇ ಸಾಲಿನ ಬಜೆಟ್‌ನಲ್ಲಿ ಜಲಸಂಪನ್ಮೂಲ ಇಲಾಖೆಗೆ ಭರಪೂರ ಅನುದಾನ ಒದಗಿಸಿದ್ದು, ಜಲ ಸಮಸ್ಯೆ ನೀಗಿಸುವ ಹಲವು ಯೋಜನೆಗಳ ಅನುಷ್ಠಾನಕ್ಕೆ ಕಟಿಬದ್ಧರಾಗಿದ್ದೇವೆ.

– ಡಿ.ಕೆ.ಶಿವಕುಮಾರ, ಡಿಸಿಎಂ



ಇಡೀ ದೇಶವೇ ಅಮೃತಕಾಲದ ಬಗ್ಗೆ ಮಾತನಾಡುತ್ತಿದ್ದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ವಿನಾಶಕಾಲದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಸುಳ್ಳು ಹೇಳಿ ಹೇಳಿ ಅದನ್ನೇ ಸತ್ಯ ಮಾಡಲು ಹೊರಟಿದ್ದಾರೆ. ಇದು 15ನೇ ದಾಖಲೆ ಬಜೆಟ್ ಅಲ್ಲ, ಡಿಪಿಆರ್ ಬಜೆಟ್ ಅಷ್ಟೇ..

– ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ



ದಾಖಲೆಯ 15ನೇ ಬಜೆಟ್ ಮಂಡಿಸಿದ ಸನ್ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಂದ ಇಂತಹ ಕಳಪೆ ಬಜೆಟ್ ನಿರೀಕ್ಷಿಸಿರಲಿಲ್ಲ. ದೆಹಲಿಯಲ್ಲಿ ಕಾಂಗ್ರೆಸ್ ನಡೆಸಿದ ಪ್ರತಿಭಟನೆಯ ಮುಂದುವರಿದ ಭಾಗವಾಗಿ, ತಮ್ಮ ವೈಫಲ್ಯ ಮುಚ್ಚಿಕೊಳ್ಳಲು, ಕೇಂದ್ರ ಸರ್ಕಾರವನ್ನು ದೂರಲು ಈ ಬಜೆಟ್ ಮಂಡಿಸಿದಂತಿದೆ. ಗೊತ್ತುಗುರಿಯಿಲ್ಲದ, ರಾಜ್ಯದ ಅಭಿವೃದ್ಧಿಗೆ ಮಾರಕವಾಗಿದೆ ಈ ಬಜೆಟ್

– ಬಿ.ಎಸ್.ಯಡಿಯೂರಪ್ಪ ಮಾಜಿ ಸಿಎಂ



ಬಜೆಟ್ ಭಾಷಣ ಬಹಿಷ್ಕಾರ ಮಾಡಿದ ಘಟನೆ ನಾನು ಇತಿಹಾಸದಲ್ಲೇ ನೋಡಿಲ್ಲ, ಇದು ಸಂವಿಧಾನಕ್ಕೆ ಮಾಡಿದ ಅಪಮಾನ ಅಂತ ಬುರುಡೆ ಬಿಡುವ ಮೊದಲ ತಮ್ಮ ಹಾಗೂ ತಮ್ಮ ಪಕ್ಷದ ಇತಿಹಾಸ ಒಮ್ಮೆ ತೆಗೆದು ನೋಡಿ ಸಿಎಂ ಸಿದ್ದರಾಮಯ್ಯ ಅವರೇ. 2021ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಬಜೆಟ್ ಭಾಷಣವನ್ನು ಬಹಿಷ್ಕಾರ ಮಾಡಿ ಸದನದಿಂದ ವಾಕ್ ಔಟ್ ಮಾಡುವ ಮೂಲಕ ಯಡಿಯೂರಪ್ಪನವರಂತಹ ಮುತ್ಸದ್ಧಿ, ಹಿರಿಯ ಜನ ನಾಯಕರಿಗೆ ಅವಮಾನ ಮಾಡುವಾಗ ತಮ್ಮ ಈ ಉಪದೇಶ ತಮಗೆ ನೆನಪಿರಲಿಲ್ಲವೆ?
ತಾವು ಮಹಾ ಸಾಚಾ ಎನ್ನುವಂತೆ ಮಾಧ್ಯಮಗಳ ಮುಂದೆ ನಾಟಕ ಆಡುವುದರಿಂದ ಏನೂ ಪ್ರಯೋಜನವಿಲ್ಲ. ತಮ್ಮ ಆಷಾಢಭೂತಿತನ, ಎರಡು ನಾಲಿಗೆ ಬಗ್ಗೆ ಎಲ್ಲರಿಗೂ ತಿಳಿದಿದೆ.

– ಆರ್.ಅಶೋಕ ವಿರೋಧ ಪಕ್ಷದ ನಾಯಕ

## ಇಂದು 'ಜಾಗ್ರತೆ'ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ವಂಚನೆ ಮುಕ್ತ ಸಮಾಜದ ನಿರ್ಮಾಣಕ್ಕಾಗಿ 'ಜಾಗ್ರತೆ' ಕಾರ್ಯಕ್ರಮವನ್ನು ಫೆ.17 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್‌ನ ನಜೀರ್‌ಸಾಬ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಯುವ ಸಬಲೀಕರಣ, ಕ್ರೀಡೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಅವರು ಉದ್ಘಾಟನೆ ಮಾಡುವರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗು ಶಾಸಕ ಜೆ.ಎನ್ ಗಣೇಶ್, ಸಂಸದರಾದ ವೈ.ದೇವೇಂದ್ರಪ್ಪ, ಕರಡಿ ಸಂಗಣ್ಣ, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಈ.ತುಕಾರಾಂ, ಬಿ.ಎಂ ನಾಗರಾಜ್, ನಾರಾ ಭರತ್ ರೆಡ್ಡಿ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಮಹಾನಗರ ಪಾಲಿಕೆಯ ಮಹಾ ಪೌರರಾದ ಬಿ.ಶ್ವೇತ ಅವರು ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕ ಬಿ.ಎಸ್.ಲೋಕೇಶ್ ಕುಮಾರ್, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್, ಸಹಾಯಕ ಆಯುಕ್ತ ಹೇಮಂತ್.ಎನ್., ಅರಣ್ಯ ಉಪಸಂರಕ್ಷಣಾಧಿಕಾರಿ ಸಂದೀಪ್ ಹಿಂದುರಾವ್ ಸೂರ್ಯವಂಶಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಕೆ.ಪಿ.ರವಿಕುಮಾರ್, ನವೀನ್ ಕುಮಾರ್, ಮಹಾನಗರ ಪಾಲಿಕೆ ಆಯುಕ್ತರಾದ ಜಿ.ಖಲೀಲ್ ಸಾಬ್, ಮಿನೆರ ಸ್ಟೀಲ್ಸ್ ಮತ್ತು ಪವರ್ ಪ್ರೈ.ಲಿಮಿಟೆಡ್‌ನ ನಿರ್ದೇಶಕ ಹನ್ಮಂತ್ ರೆಡ್ಡಿ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಸಂವಿಧಾನ ಪ್ರತಿಯೊಬ್ಬರಿಗೂ ಸಮಾನತೆ ತಂದಿದೆ

**ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲ್ಲೂಕಿನ ಉಚ್ಚಂಗಿದುರ್ಗ ಗ್ರಾಮದಲ್ಲಿ ಗುರುವಾರ ಸಂಜೆ ಗ್ರಾಮ ಪಂಚಾಯಿತಿ ವತಿಯಿಂದ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ರೇಣುಕಾ ದೇವಿ ಮಾತನಾಡಿ:–ಸಂವಿಧಾನ ಎಲ್ಲರಿಗೂ ನ್ಯಾಯವನ್ನು ಸರ್ವರಿಗೂ ನೀಡುವ ಸಂವಿಧಾನವಾಗಿದೆ,ಸಂವಿಧಾನದ ಮಹತ್ವವನ್ನು ಮನೆ ಮನೆಗೂ ತಲುಪಿಸುವ ಪ್ರಯತ್ನವನ್ನು ರಾಜ್ಯ ಸರ್ಕಾರ ಜಾಗೃತಿ ಜಾಥಾ ಮೂಲಕ ಮಾಡುತ್ತಿದೆ.


ಪ್ರತಿಯೊಬ್ಬರಿಗೂ ಸ್ವತಂತ್ರ, ಸಮಾನತೆ, ಏಕತೆ ತರುವಲ್ಲಿ ತನ್ನದೇ ಆದ ಪಾತ್ರ ವಹಿಸಿದೆ, ಇಡೀ ತಾಲ್ಲೂಕಿನಲ್ಲಿಯೇ ಉಚ್ಚಂಗಿದುರ್ಗ ಗ್ರಾಮದಲ್ಲಿ ವಿವಿಧ ಕಲಾ ತಂಡಗಳಾದ ಡೊಳ್ಳು ಕುಣಿತ, ತಮಟೆ, ಸಮಾಳ, ಕೋಲಾಟ,ಗೊಂಬೆ ಕುಣಿತ,ಲಂಬಾಣಿ ನೃತ್ಯವು ಕೋಟೆ ಕ್ಯಾಪಿನಿಂದ ಸಾರ್ವಜನಿಕ ಆಸ್ಪತ್ರೆವರೆಗು ಎರಡು ಕಿ.ಮೀ. ದೂರ ಅದ್ದೂರಿ ಮೆರವಣಿಗೆ ಮಾಡಿರುವುದು ವಿಶೇಷವಾಗಿತ್ತು.

ಬಾಬಾ ಸಾಹೇಬ್ ಡಾ.ಬಿ. ಆರ್.ಅಂಬೇಡ್ಕರ್ ಹಾಗೂ ಅವರು ರಚಿಸಿದ ಸಂವಿಧಾನ ಸ್ತಬ್ದ ಚಿತ್ರವನ್ನು ಸಾರ್ವಜನಿಕರು, ಚುನಾಯಿತ ಪ್ರತಿನಿಧಿಗಳು, ಶಾಲಾ, ಕಾಲೇಜ್ ವಿದ್ಯಾರ್ಥಿಗಳು, ವಿವಿಧ ಸಂಘಟನೆಗಳ ಮುಖಂಡರು, ಆಶಾ ಕಾರ್ಯ ಕರ್ತೆಯರು, ಮೆರವಣಿಗೆಯಲ್ಲಿ ಪಾಲ್ಗೊಂದಿದ್ದರು.

ಗುರುವಾರ ತೌಡೂರು, ಹೊಸಕೋಟೆ, ಅಣಜಿಗೆರೆ ಹಾಗೂ ಉಚ್ಚಂಗಿದುರ್ಗ ಗ್ರಾಮದಲ್ಲಿ ಸಂವಿಧಾನ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಅಂಬೇಡ್ಕರ್ ಭಾವಚಿತ್ರಕ್ಕೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶಿಲ್ಪಾ ಉಮೇಶ್ ನಾಯ್ಕ್ ಮಾಲಾರ್ಪಣೆ ಮಾಡಿ ಸ್ವಾಗತಿದರು. ಈ ಸಂದರ್ಭದಲ್ಲಿ ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಇದೇ ಸಂದರ್ಭದಲ್ಲಿ ಸಂವಿಧಾನದ ಬಗ್ಗೆ ಶಿಕ್ಷಕರಾದ ನಾಗರಾಜ್ ನಾಯ್ಕ್ ಮಾತನಾಡಿದರು.

ಶಿಲ್ಪಾ ಉಮೇಶ್ ನಾಯ್ಕ್ ಅಧ್ಯಕ್ಷತೆ ವಹಿಸಿದ್ದರು, ಉಪಾಧ್ಯಕ್ಷರಾದ ಮಡ್ರಳ್ಳಿ ಕೆಂಚಪ್ಪ, ನಾಗಮ್ಮ ಭರಮಪ್ಪ, ಕೆ.ಮಂಜಪ್ಪ, ಪಾಟೀಲ್ ಸಿದ್ದೇಶ್ವರ ಗೌಡ, ಸಾಕಮ್ಮ ಸಿದ್ದಪ್ಪ, ಕಾಳಮ್ಮ ಹನುಮಂತಪ್ಪ, ಪೂಜಾರ್ ದಂಡೆಪ್ಪ, ಅತಾವುಲ್ಲಾ,ಪಿ. ಹಾಲೇಶ್,ಕೆ.ಅಜ್ಜಯ್ಯ,ಗಂಗಮ್ಮ ರಮೇಶ್, ನಾಗಪ್ಪ,ಪಿಡಿಒ. ಪರಮೇಶ್ವರಪ್ಪ,ವಿವಿಧ ಕಲಾವಿದರು, ಎಲ್ಲಾ ಶಾಲೆಯ ಮುಖ್ಯ ಗುರುಗಳು, ಸಹ ಶಿಕ್ಷಕರು,ಶಾಲಾ ಮಕ್ಕಳು ಹಾಗೂ ಊರಿನ ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.






Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA